ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 52 ಡಿಸೆಂಬರ್ 23, 1984 ಬೆಲೆ 60 ಪೈಸೆ.

ಸಿಪಿಐ [ಎಂ] ನ ಚುನಾವಣಾ ಚಿನ್ಹೆ

ಕಾ|| ಇ. ಎಂ. ಎಸ್. ನಂಬೂದಿರಿಪಾಡ್ ಅವರ ಕರೆ

ದೇಶದ ಸಮಗ್ರತೆ ಉಳಿಸಲು ಕಾಂಗ್ರೆಸ್ — ಬಿಜೆಪಿ ಗಳನ್ನು ಸೋಲಿಸಿರಿ

ನಮ್ಮ ಭಾರತ ದೇಶ ಛಿದ್ರವಿಚ್ಛಿದ್ರವಾಗುವುದನ್ನು ತಪ್ಪಿಸಲು, ಜಾತೀಯ ಸೌಹಾರ್ದತೆ ಹಾಗೂ ಪ್ರಜಾಪ್ರಭುತ್ವವನ್ನು ಉಳಿಸಲು ಇಂದಿರಾ ಕಾಂಗ್ರೆಸ್ಸನ್ನೂ, ಭಾರತೀಯ ಜನತಾ ಪಕ್ಷ ಪಕ್ಷವನ್ನೂ ಸೋಲಿಸಲೇ ಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯುವರಾದ ಇ. ಎಂ. ಎಸ್. ನಂಬೂದಿರಿಪಾಡ್ ಅವರು ಉಡುಪಿ ಲೋಕಸಭಾ ಮತ ಕ್ಷೇತ್ರದ ಮತದಾರರಿಗೆ ಕರೆ ಕೊಟ್ಟರು.

ಡಿಸೆಂಬರ್ 16 ರಂದು ಕುಂದಾಪುರ ಮತ್ತು ಉಡುಪಿಯಲ್ಲಿ ಬೃಹತ್ ಸಾರ್ವಜನಿಕ ಸಭೆಗಳಲ್ಲಿ ಅವರು ಭಾಷಣ ಮಾಡುತ್ತ ಈ ಕ್ಷೇತ್ರದ ಸಿಪಿಐ (ಎಂ) ಅಭ್ಯರ್ಥಿಯಾದ ಕೆ. ಆರ್. ಶ್ರೀಯಾನ್ ಅವರಿಗೆ ಮತನೀಡಬೇಕೆಂದು ಕೇಳಿಕೊಂಡರು.

ಕಾ|| ಇ.ಎಂ.ಎಸ್. ಅವರು ದೇಶದಲ್ಲಿಯ ಕಳೆದ 5 ವರ್ಷಗಳ ಕಾಂಗ್ರೆಸ್ ಆಡಳಿತೆಯನ್ನು ವಿವರಿಸುತ್ತಾ, ಪ್ರಧಾನ ಮಂತ್ರಿಯನ್ನು ರಕ್ಷಿಸಲಾರದ ಸರಕಾರ ದೇಶವನ್ನು ರಕ್ಷಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಮತದಾರರ ಮುಂದಿಟ್ಟರು.

ಅಸ್ಸಾಂ–ಪಂಜಾಬ್, ತ್ರಿಪುರಾಗಳಲ್ಲಿ ವಿಭಜನಕಾರಿ ಶಕ್ತಿಗಳಿಗೆ ಕಾಂಗ್ರೆಸ್ ಪಕ್ಷ ಮತ್ತು ಇಂದಿರಾ ಗಾಂಧಿ ಕುಮ್ಮಕ್ಕು ಕೊಟ್ಟು ಅಸ್ಸಾಂ–ಪಂಜಾಬ್ ಸಮಸ್ಯೆಗಳನ್ನು ಬಗೆಹರಿಸದೆ ಛಿದ್ರಕಾರಿ ಶಕ್ತಿಗಳು ಬಲಗೊಳ್ಳುವಂತೆ ಮಾಡಿ, ಕೊನೆಗೆ ಅದೇ ಛಿದ್ರಕಾರಿ ಶಕ್ತಿಗಳಿಂದಲೇ ಮೃತ್ಯುವಶರಾದರೆಂದು ಹೇಳಿ, ಈ 8 ನೇ ಲೋಕಸಭೆಯ ಚುನಾವಣೆಯಲ್ಲಿ ತನ್ನ ಪಕ್ಷಕ್ಕೆ ಮತ ನೀಡಿ ಅದು ಮತ್ತೆ ಅಧಿಕಾರಕ್ಕೆ ಬರುವಂತೆ ಸಹಕರಿಸಬೇಕೆಂದು ಜನರಿಗೆ ವಿನಯ ಮಾಡಿಕೊಳ್ಳುತ್ತಿರುವ ಕಾಂಗ್ರೆಸ್ ಅಧ್ಯಕ್ಷ ರಾಜೀವ ಗಾಂಧಿ, ಇಂದಿರಾ ಗಾಂಧಿಯ ಕೊಲೆಯಾದಂತೆಯೇ, ಅಂಥವೇ ಶಕ್ತಿಗಳಿಂದ ತನ್ನ ಹಾಗೆಯೇ ಇತರ ಮಂತ್ರಿಗಳ, ಸಾರ್ವಜನಿಕರ ಕೊಲೆಯಾಗಲಾರದೆಂಬ ಭರವಸೆ ಕೊಡುತ್ತಾರೆಯೇ ? ಇಂದಿರಾ ಗಾಂಧಿಯ ಕೊಲೆಯಾದ ಕೂಡಲೇ ದಿಲ್ಲಿ ಹಾಗೂ ಮತ್ತಿನ್ನಿತರ ಪ್ರದೇಶಗಳಲ್ಲಿ ಸೀಖ್ ಜನರ ಮೇಲೆ ಅತ್ಯಾಚಾರ ನಡೆದು, ಆಸ್ತಿ–ಪಾಸ್ತಿ ಲೂಟಿಯಾಗಿ, ನರಹತ್ಯೆ ನಡೆದಂತೆಯೇ, ಇನ್ನು ಮುಂದೆ ಮುಸಲ್ಮಾನರ, ಕ್ರಿಶ್ಚಿಯನ್ನರ. ಹಿಂದೂಗಳ, ಅಲ್ಪಮತಸ್ಥರ ಹತ್ಯೆ, ಲೂಟಿ, ನಡೆಯಲಾರದೆಂಬ ಭರವಸೆಯನ್ನು ಕೊಡುತ್ತಾರೆಯೇ ಎಂದು ರಾಜೀವ ಗಾಂಧಿಯವರಿಗೆ ನೇರ ಪ್ರಶ್ನೆ ಹಾಕಿದರು.

1980 ರ ಲೋಕಸಭೆ ಚುನಾವಣೆಯಲ್ಲಿ ಇಂದಿರಾಗಾಂಧಿಯವರು ತಮಗೆ ಮತ ನೀಡಿ ಮತ್ತೆ ಸರಕಾರ ರಚಿಸಲು ಅವಕಾಶ ಮಾಡಿಕೊಟ್ಟರೆ ಕೆಲಸ ಮಾಡುವ ಸರಕಾರ ಸ್ಥಾಪಿಸುತ್ತೇನೆಂದೂ, ಬೆಲೆಯೇರಿಕೆ ತಡೆಗಟ್ಟುತ್ತೇನೆಂದೂ, ನಿರುದ್ಯೋಗ ಸಮಸ್ಯೆ ಬಗೆಹರಿಸುತ್ತೇವೆಂದೂ ಆಶ್ವಾಸನೆ ನೀಡಿದ್ದರು. ಇಂದಿರಾ ಗಾಂಧಿಯ ಕೆಲಸ ಮಾಡುವ ಸರಕಾರದಲ್ಲಿಯೇ ಅವರ ಕೊಲೆಯಾಗಿರುವುದರ ವೈಶಿಷ್ಟ್ಯವನ್ನು ವಿವರಿಸಿ, ಕಳೆದ ಐದು ವರ್ಷಗಳಲ್ಲಿ ಬೆಲೆ ಏರಿಕೆ, ನಿರುದ್ಯೋಗಗಳಂಥ ಯಾವ ಸಮಸ್ಯೆಗಳೂ ಪರಿಹಾರ ಕಾಣದೆ ಮತ್ತಷ್ಟು ಹದಗೆಡುತ್ತಿರುವುದರ ಕಡೆ ಸಭಿಕರ ಗಮನ ಸೆಳೆದರು.

ರಾಜಕೀಯ ಭಿನ್ನಾಭಿಪ್ರಾಯಗಳುಳ್ಳ ವಿರೋಧ ಪಕ್ಷಗಳು ಕೇಂದ್ರದಲ್ಲಿ ಭದ್ರ ಸರಕಾರ ರಚಿಸಲು ಸಾಧ್ಯವಿದೆಯೇ, ಕಾಂಗ್ರೆಸ್ ಈ ಚುನಾವಣೆಯಲ್ಲಿ ಆರಿಸಿ ಬಾರದಿದ್ದರೆ ದೇಶದ ಗತಿಯೇನಾದೀತೆಂದು ರಾಜೀವಗಾಂಧಿಯವರ ಸವಾಲಿಗೆ ಉತ್ತರ ನೀಡುತ್ತ ಕರ್ನಾಟಕ, ಆಂಧ್ರ, ತಮಿಳುನಾಡು, ಕಾಶ್ಮೀರ, ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಸೋತು ಅಲ್ಲಿ ವಿರೋಧ ಪಕ್ಷಗಳ ಸರಕಾರಗಳಿವೆ. ಆ ರಾಜ್ಯಗಳಲ್ಲಿ ಏನಾಗಿದೆಂದು ಪ್ರಶ್ನೆ ಕೇಳಿದರು. ಕಾಶ್ಮಿರ-ಕಲ್ಕತ್ತಾಗಳಲ್ಲಿ ಸಮಾವೇಶಗೊಂಡ ವಿರೋಧ ಪಕ್ಷಗಳ ಮತ್ತು ಕಾಂಗ್ರೆಯೇತರ ಮುಖ್ಯಮಂತ್ರಿಗಳ ಸಭೆ ಕಾಂಗ್ರೆಗೆ ಬದಲಿಯಾಗಿ ಕನಿಷ್ಠ ಕಾರ್ಯಕ್ರಮಗಳ ಆಧಾರದಲ್ಲಿ ಬದಲಿ ವ್ಯವಸ್ಥೆಯ ಕಾರ್ಯಕ್ರಮ ಒಂದನ್ನು ಹಮ್ಮಿಕೊಂಡಿದೆ. ಕಾಂಗ್ರೆ ಪಕ್ಷ ಇಂದಿರಾ ಗಾಂಧಿಯ ಹತ್ಯೆಯಾದ ಕೂಡಲೇ ರಾಜೀವ ಗಾಂಧಿಯನ್ನು "ರೆಡೀ ಮೇಡ್" ಪ್ರಧಾನ ಮಂತ್ರಿಯನ್ನಾಗಿ ನೇಮಿಸಿತು. ಆದರೆ ವಿರೋಧ ಪಕ್ಷಗಳು ಆ ರೀತಿ "ರೆಡಿ ಮೇಡ್" ಪ್ರಧಾನ ಮಂತ್ರಿಗಳನ್ನು ಜನರ ಮೇಲೆ ಹೇರುವುದಿಲ್ಲ. 1977 ರಲ್ಲಿ ಬಹುಮತ ಪಡೆದು ಆರಿಸಿ ಬಂದ ಜನತಾ ಪಕ್ಷದ ಲೋಕಸಭೆ ಸದಸ್ಯರು ಮುರಾರ್ಜಿ ದೇಸಾಯಿಯವರನ್ನ ಪ್ರಧಾನ ಮಂತ್ರಿಯನ್ನಾಗಿ ಮಾಡಿದರೆಂದು, ಕರ್ನಾಟಕದಲ್ಲಿ ಜನತಾ ಪಕ್ಷ ಬಹುಮತ ಪಡೆದ ನಂತರ ರಾಮಕೃಷ್ಣ ಹೆಗಡೆಯವರನ್ನು ಮುಖ್ಯಮಂತ್ರಿಯನ್ನಾಗಿ ಆರಿಸಿ, ಅನಂತರ ಉಪ ಚುನಾವಣೆಯಲ್ಲಿ ಅವರನ್ನು ಶಾಸಕರನ್ನಾಗಿ ಆರಿಸಿರುವ ಉದಾಹರಣೆ ಕೊಟ್ಟು ಈ ಸಲದ ಎಂಟನೆಯ ಲೋಕಸಭೆಯ

(8ನೇ ಪುಟ ನೋಡಿ)

ಸಿಪಿಐ (ಎಂ) ಅಭ್ಯರ್ಥಿ ಕಾ| ಕೆ. ಆರ್. ಶ್ರೀಯಾನ್‌ಗೆ ಮತ ನೀಡಿ



ಮಂಗಳೂರಿನ ಬಡ ರೈತ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ಕಾಂ. ಕೆ. ಆರ್. ಶ್ರೀಯಾನ್, ಬಾಲ್ಯದಿಂದಲೂ ಬಡರೈತರ ಕಾರ್ಮಿಕರ ಮತ್ತು ದುಡಿಯುವ ಜನತೆಯ ಮೇಲೆ ಆಗುತ್ತಿರುವ ಶೋಷಣೆ, ದಬ್ಬಾಳಿಕೆಗಳನ್ನು ಕಂಡು, ಅನುಭವಿಸಿ, ಅವುಗಳ ವಿರುದ್ಧ, ಹೋರಾಡಲು ತನ್ನ ಬಾಳನ್ನು ಅರ್ಪಿಸಿಕೊಂಡ ತ್ಯಾಗ ಜೀವಿ. 1952 ರಲ್ಲಿ ಪ್ರಥಮ ಮಹಾ ಚುನಾವಣೆ ನಡೆಯುತ್ತಿದ್ದಾಗ ಇನ್ನೂ ವಿದ್ಯಾರ್ಥಿಯಾಗಿದ್ದ ಶ್ರೀಯುತರು, ಕಮ್ಯುನಿಸ್ಟ್ ಅಭ್ಯರ್ಥಿಯ ಪರವಾಗಿ ಚುನಾವಣಾಪ್ರಚಾರ ಮಾಡುತ್ತಾ, ಹಗಲಿರುಳೂ ದುಡಿಯುವುದರೊಂದಿಗೆ ರಾಜಕೀಯ ಚಟುವಟಿಕೆಯನ್ನು ಆರಂಭಿಸಿದರು. 1953 ರಿಂದ ರೈತ ಸಂಘದ ಕಾರ್ಯಕರ್ತನಾಗಿ ದುಡಿಯಲಾರಂಭಿಸಿ, 1955 ರಲ್ಲಿ "ರೈತ ಶಕ್ತಿ" ಎಂಬ ಪತ್ರಿಕೆಯನ್ನು ನಡೆಸಿದರು. ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಮುಖ ಪತ್ರಿಕೆಯಾಗಿದ್ದ "ಅರುಣ" ಪತ್ರಿಕೆಯಲ್ಲೂ ದುಡಿದರು.

ಕಮ್ಯೂನಿಸ್ಟ್ ಪಕ್ಷವು ವಿಭಜನೆಗೊಂಡಾಗ ಸಿ. ಪಿ. ಐ. (ಎಂ) ನಲ್ಲಿ ಮುಂದುವರಿದ ಕಾಂ. ಶ್ರೀಯಾನರು 1964 ರಲ್ಲಿ "ಐಕ್ಯರಂಗ" ವಾರ ಪತ್ರಿಕೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. 1978ರಲ್ಲಿ ಪತಿಕ್ರಿಯ ಪ್ರಕಟನಾ ವಿಭಾಗವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ವರೆಗೂ "ಐಕ್ಯರಂಗ"ದ ಸಹ ಸಂಪಾದಕರಾಗಿ ದುಡಿದರು.

1978 ರಿಂದೀಚೆಗೆ ಸಿ.ಪಿ.ಐ.[ಎಂ] ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿಯೂ 1980 ರಿಂದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಪ್ರಬಲ ಟ್ರೇಡ್ ಯೂನಿಯನ್ ಸಂಘಟಕರೂ ಸತ್ವವಂತ ಹೋರಾಟಗಾರರೂ ಆದ ಶ್ರೀಯುತರು ದ. ಕ. ಜಿಲ್ಲೆಯ ಅತ್ಯಂತ ಪ್ರಬಲ, ಸಮರಶೀಲ ಟ್ರೇಡ್ ಯೂನಿಯನ್ ಸಂಘಟನೆಯಾದ ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾಗಿರುತ್ತಾರೆ. ಮಹಿಳೆಯರೇ ಬಹು ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರ ಮೇಲೆ ನಡೆಯುತ್ತಿರುವ ಶೋಷಣೆ ಮತ್ತು ದಬ್ಬಾಳಿಕೆಗಳ ವಿರುದ್ಧ ಅವಿರತ ಹೋರಾಟವನ್ನು ನಡೆಸುತ್ತಿರುವ, ಬೀಡಿ ಕಾರ್ಮಿಕರ ಸಂಘಟನೆಯಲ್ಲೂ ಪ್ರಮುಖ ಪಾತ್ರವನ್ನು ವಹಿಸುತ್ತಿರುವ ಶ್ರೀಯುತರು ಪದವು ಪ್ರದೇಶ ಬೀಡಿ ಲೇಬರ್ ಯೂನಿಯನಿನ ಅಧ್ಯಕ್ಷರೂ ಆಗಿರು

(8ನೇ ಪುಟ ನೋಡಿ)

ಕಲ್ಕತ್ತ ಸಮಾವೇಶದ ಆರ್ಥಿಕ ಕಾರ್ಯಕ್ರಮ

ನಮ್ಮ ದೇಶದಲ್ಲಿಯ ಈಗಿನ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಚುನಾವಣೆಯಲ್ಲಿ ಶಕ್ತಿಗಳ ಹೊಸ ಸಂಯೋಜನೆಗಾಗಿ ಕೆಲಸ ಮಾಡುತ್ತದೆ. ಆ ಹೊಸ ಸಂಯೋಜನೆಯಿಂದಾಗಿ, ಕಾಂಗ್ರೆಸ್ ಸೋಲಬೇಕು, ಛಿದ್ರಕಾರಿ ಶಕ್ತಿಗಳು ಪ್ರತ್ಯೇಕಿಸಲ್ಪಡಬೇಕು. ಜಾತ್ಯಾತೀತ ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಳ್ಳಬೇಕು.

ಕಾಂಗ್ರೆಸ್ಸನ್ನು ಸೋಲಿಸಬೇಕಾದರೆ ಒಂದೇ ಪಕ್ಷದಿಂದ ಸಾಧ್ಯವಿಲ್ಲ. ಜಾತೀಯತೆ, ಸರ್ವಾಧಿಕಾರದ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವವನ್ನು ರಕ್ಷಿಸುವ, ತಟಸ್ಥ ನೀತಿಗೆ ಬೆಂಬಲ ನೀಡುವ, ಸಾಮ್ರಾಜ್ಯಶಾಹಿಗಳ ಕುತಂತ್ರಗಳ ಕುರಿತು ಎಚ್ಚರಿಕೆಯಿಂದಿರುವ, ಕೇಂದ್ರ-ರಾಜ್ಯಗಳ ಸಂಬಂಧ ಸರಿಯಾಗಿರಬೇಕೆಂದು ಅಪೇಕ್ಷಿಸುವ, ಬೆಲೆ ಹೆಚ್ಚಳ, ನಿರುದ್ಯೋಗ, ಕಡಿಮೆ ವೇತನಗಳಿಗೆ ಕೂಡಲೇ ಪರಿಹಾರ ಒದಗಿಸಬೇಕೆಂದು ಒಪ್ಪಿಕೊಳ್ಳುವಂಥ ಶಕ್ತಿಗಳ ಒಕ್ಕೂಟ ಅತ್ಯಗತ್ಯ.

ಇಂಥ ಒಕ್ಕೂಟಕ್ಕೆ ಈ ಚುನಾವಣೆಯಲ್ಲಿ ಸಿ.ಪಿ.ಐ. [ಎಂ] ಬೆಂಬಲ ನೀಡಲು ತಯಾರಿದೆ. ಈ ಮೇಲಿನ ಕಾರ್ಯಕ್ರಮವನ್ನೊಪ್ಪಿ ಸರಕಾರಕ್ಕೆ ಬೆಂಬಲ ನೀಡಲೂ ಸಿದ್ಧವಿದೆ. ಶ್ರೀನಗರ ಮತ್ತು ಕಲ್ಕತ್ತದಲ್ಲಿ ಸಮಾವೇಶಗೊಂಡ ವಿರೋಧ ಪಕ್ಷಗಳ ಹಾಗೂ ಕಾಂಗ್ರೆಸ್ಸೇತರ ಸರಕಾರಗಳ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಾದ ನಿರ್ಣಯಗಳು ಅಂಥ ಒಕ್ಕೂಟಕ್ಕೆ ತಳಹದಿಯಾಗಬೇಕೆಂದು ಸಿಪಿಐ [ಎಂ] ಅಭಿಪ್ರಾಯ ಪಡುತ್ತದೆ.

ಜನವರಿ 13–14, 1984ರ ಕಲ್ಕತ್ತಾ ಸಮಾವೇಶದಲ್ಲಿ ಕೈಗೊಂಡ ಆರ್ಥಿಕ ಪರಿಸ್ಥಿತಿಯ ಕುರಿತಾದ ನಿರ್ಣಯವನ್ನು ಪ್ರಕಟಿಸುತ್ತಿದ್ದೇವೆ.

ರಾಜಕೀಯ ಪಕ್ಷಗಳ ಮತ್ತು ಮುಖ್ಯ ಮಂತ್ರಿಗಳ ಈ ಸಮಾವೇಶ ದೇಶವನ್ನಾವರಿಸಿರುವ ಭೀಕರ ಬಿಕ್ಕಟ್ಟನ್ನು ಗಮನಕ್ಕೆ ತೆಗೆದುಕೊಂಡಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾಯಿತು. ಚುನಾವಣೆಯ ಮುಂಚೆ ಮತದಾರರಿಗೆ ವಿನಂತಿ ಮಾಡಿಕೊಂಡ ಆ ಪಕ್ಷದ ಮುಖಂಡ "ಕೆಲಸ ಮಾಡುವ ಸರಕಾರ" ಒದಗಿಸುತ್ತೇವೆಂದು ಆಶ್ವಾಸನೆ ನೀಡಿದ್ದರು. ಅತ್ಯಾವಶ್ಯಕ ವಸ್ತುಗಳ ಬೆಲೆ ಇಳಿಸುತ್ತೇವೆಂದೂ, ಜನರ ಆರ್ಥಿಕ ಮಟ್ಟ ಸುಧಾರಿಸುತ್ತೇವೆಂದೂ, ದೇಶದ ಐಕ್ಯತೆಗೆದುರಾಗಿರುವ ಜಾತೀಯ, ಧರ್ಮೀಯ ಛಿದ್ರಕಾರಿ ಶಕ್ತಿಗಳನ್ನೆದುರಿಸುತ್ತೇವೆಂದೂ ವಚನವಿತ್ತಿದ್ದರು. ಈ ಆಶ್ವಾಸನೆಗಳನ್ನು ಪೂರೈಸಲು ಕಾಂಗ್ರೆಸ್ ಪಕ್ಷಕ್ಕೆ ಆಸೆ, ಇಲ್ಲವೆಂಬ ಸಂಗತಿ ಅನುಭವದಿಂದ ಕಂಡು ಬಂದಿದೆ. ದೇಶದ ಹಾಗೂ ಜನತೆ ಎದುರಿಸುತ್ತಿರುವ ಸಮಸ್ಯೆಗಳು ಬಗೆಹರಿದಿಲ್ಲ ಅಷ್ಟೇ ಅಲ್ಲ ಅವು ಇನ್ನೂ ತೀವ್ರಗೊಳ್ಳುತ್ತಿವೆ. ದೇಶದ ಮೇಲೆ ಕಾಳಜಿ ಇರುವ ಯಾವನೇ ಪಕ್ಷವಾಗಲೀ, ಸಂಘಟನೆಯಾಗಲೀ, ವ್ಯಕ್ತಿಯಾಗಲೀ. ಪರಿಸ್ಥಿತಿ ಹದಗೆಡುತ್ತಿರುವಾಗ ಮೂಕ ಪ್ರೇಕ್ಷಕನಾಗಿರಲು ಸಾಧ್ಯವಿಲ್ಲ.

ಬೆಲೆ ವಿಷಯದಲ್ಲಿ ಕೇಂದ್ರ ಸರಕಾರ ಅತಿ ಹೆಚ್ಚು ವಿಫಲಗೊಂಡಿದೆ. ಈ ವರ್ಷ ಉತ್ತಮ ಮಳೆಯಿಂದಾಗಿ ಅತಿ ಹೆಚ್ಚು ಉತ್ಪಾದನೆಯಾಗಿದೆಂದು ಕೇಂದ್ರ ಒಪ್ಪಿಕೊಂಡಿದ್ದರೂ, ಬೆಲೆ ಇಳಿಯಬೇಕಾದ ದಿನಗಳಲ್ಲಿಯೂ ಅದು ಕಡಿಮೆಯಾಗಿಲ್ಲ. ಆಹಾರ ಧಾನ್ಯವನ್ನೊಳಗೊಂಡು ಎಲ್ಲ ವಸ್ತುಗಳ ಬೆಲೆ ಹೆಚ್ಚಾಗುತ್ತಲಿದೆ. ಕಳೆದ ಒಂದು ವರ್ಷದಲ್ಲಿ ಠೋಕ ಬೆಲೆ ಶೇ 10 ರಷ್ಟು ಹೆಚ್ಚಾಗಿದೆ. ಚಿಲ್ಲರೆ ವ್ಯಾಪಾರದ ಬೆಲೆ ಕೈಗೆಟಕಲಾರದಷ್ಟಾಗಿದೆ. ಬೆಲೆ ಹೆಚ್ಚಳವಾಗಿದೆಂದು ಕೇಂದ್ರ ಸರಕಾರ್ವ ಮತ್ತು ಆಳುವ ಪಕ್ಷ ಒಪ್ಪಿಕೊಂಡರೂ ಕೂಡ, ಆ ಪರಿಸ್ಥಿತಿ ಉಂಟಾಗಲು ಕಾರಣವೇನೆಂಬುದಕ್ಕೆ ಸಮರ್ಪಕ ಉತ್ತರ ನೀಡದಾಗಿದ್ದಾರೆ. ಈ ರೀತಿಯ ಬೆಲೆ ಉಬ್ಬರಕ್ಕೆ ಕಾರಣೀಭೂತರಾದವರಿಗೆ ಆಳುವ ಕಾಂಗ್ರೆಸ್ ಪಕ್ಷವೇ ಪ್ರೋತ್ಸಾಹ ನೀಡುತ್ತಿದೆಂಬುದನ್ನು ಒತ್ತಿ ಹೇಳಬೇಕಾಗಿದೆ.

ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ಆಡಳಿತೆಯ ಖರ್ಚಿನ ನೆಪದಲ್ಲಿ ಕೇಂದ್ರ ಸರಕಾರವೇ ಹೆಚ್ಚಿಸುತ್ತಿದೆ. ಸರಕಾರದ ಅನಾವಶ್ಯಕ ಖರ್ಚಿನಿಂದಾಗಿ ಕಳೆದ ಮೂರು ವರ್ಷಗಳಲ್ಲಿ ರೂ. 15,000 ಕೋಟಿಯಷ್ಟು ಹಣ ಸೆಂದಾಯವಾಗಿದೆ. ದೊಡ್ಡ ಉದ್ಯೋಗಪತಿಗಳಿಗೂ, ವ್ಯಾಪಾರಸ್ಥರಿಗೂ ಎಲ್ಲೆ ಮೀರಿ ಧನ ಸಹಾಯ ಮಾಡುತ್ತಿದೆ. ಬೆಲೆ ಹೆಚ್ಚಳಕ್ಕೆ ಕಾರಣೀಭೂತರಾದವರಿಗೆ ಬ್ಯಾಂಕಿನಿಂದ ಹೆಚ್ಚು ಹಣ ಸಂದಾಯ ಮಾಡಲಾಗುತ್ತಿದೆ. ಕಾಂಗ್ರೆಸ್ ಸರಕಾರದ ನೀತಿಯಿಂದಾಗಿ ಒಂದು ವಸ್ತು ಹೆಚ್ಚು ಉತ್ಪಾದನೆಯಾದಾಗ ಅದರ ಬೆಲೆ ಕಡಿಮೆಯಾಗುವ ಬದಲಾಗಿ ಅದು ಹೆಚ್ಚಾಗುತ್ತಿದೆ. ಉದಾಹರಣೆಗಾಗಿ ಸರಕಾರಿ ಗುದಾಮುಗಳಲ್ಲಿರುವ ಆಹಾರ ಧಾನ್ಯ, ಸಕ್ಕರೆ ಮುಂತಾದವುಗಳನ್ನು ಒದಗಿಸುವುದರ ಮೂಲಕವೂ ಬೆಲೆ ಹೆಚ್ಚಳಕ್ಕೆ ಅನುಕೂಲ ಮಾಡಿಕೊಡುತ್ತಿದೆ.

ಅತ್ಯಾವಶ್ಯಕ ವಸ್ತುಗಳ ಬೆಲೆ ಈ ರೀತಿ ಹೆಚ್ಚಾಗುತ್ತಿರುವಾಗ, ರೈತರಿಗೆ ನ್ಯಾಯಬೆಲೆ ಸಿಗುವಂತೆ ಮಾಡಲು ಸರಕಾರ ವಿಫಲಗೊಂಡಿದೆ. ಗುತ್ತೇದಾರಿಗಳ, ಮಧ್ಯ ದಲ್ಲಾಳಿಗಳ ದುರ್ವ್ಯವಹಾರದಿಂದ ರೈತರಿಗೂ ಗ್ರಾಹಕರಿಗೂ ರಕ್ಷಣೆ ನೀಡದೆ ಇವರನ್ನು ಸುಲಿಯಲು ಕಾಂಗ್ರೆಸ್ ಸರಕಾರ ಅಂಥ ಶಕ್ತಿಗಳಿಗೆ ಅವಕಾಶಮಾಡಿ ಕೊಡುತ್ತಿದೆ.

ಉದ್ಯೋಗ ಸಮಸ್ಯೆಯೂ ಹದಗೆಡುತ್ತಿದೆ. ಕೈಗಾರಿಕೆ ಮತ್ತು ಇತರ ಕೇಂದ್ರಗಳ ಉತ್ಪಾದನಾನೀಡಿಕೆ ಹೊಸ ಉದ್ಯೋಗಗಳಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 24 ಮಿಲಿಯಕ್ಕೂ ಹೆಚ್ಚು ಜನ ಹೆಸರು ನೋಂದಾಯಿಸಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶಗಳ ಜನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೊಂದಾಯಿಸಿಕೊಳ್ಳುವುದಿಲ್ಲ. ಅದನ್ನೆಲ್ಲ ನೋಡಿದರೆ ನಿರುದ್ಯೋಗಿಗಳ ಸಂಖ್ಯೆಗೆ ಮಿತಿಯಿಲ್ಲ.

ಕಾಂಗ್ರೆಸ್ ಸರಕಾರ ಅನುಸರಿಸುತ್ತಿರುವ ಆರ್ಥಿಕ ಮತ್ತು ಔದ್ಯಮಿಕ ನೀತಿಗಳಿಂದಾಗಿ ನಿರುದ್ಯೋಗ ಸಮಸ್ಯೆ ಕೀಳ್ಮಟ್ಟಕ್ಕಿಳಿದಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಆದೇಶಕ್ಕೆ ತಲೆಬಾಗಿ ಕೈಗಾರಿಕಾ ವಸ್ತುಗಳನ್ನು ಮಿತಿಮೀರಿ ಆಮದು ಮಾಡಲು ಅವಕಾಶ ಮಾಡಿಕೊಟ್ಟಿದೆ. ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿಟ್ಟದ್ದ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಕಾರ್ಪೋರೇಷನ್‌ಗಳೂ ಗುತ್ತೇದಾರಿ ಮನೆತನಗಳೂ ಪ್ರವೇಶಿಸಲಿಕ್ಕೆ ಅವಕಾಶಮಾಡಿಕೊಟ್ಟಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಮಿಲಿಯಗಟ್ಲೆ ಜನರಿಗೆ ಉದ್ಯೋಗದ ಅವಕಾಶ ಮಾಡಿಕೊಡಬಹುದಾದ "ಕೆಲಸಕ್ಕೆ ಆಹಾರ" ಕಾರ್ಯಕ್ರಮವನ್ನು ಹಾಳುಗೆಡವಿದೆ. ಇಂಥ ಕೃತಿಗಳು ಕಾಂಗ್ರೆಸ್ ಪಕ್ಷದ ಮೋಸಗಾರಿಕೆಯನ್ನು ತೋರ್ಪಡಿಸುತ್ತವೆ

ಒಂದು ಕಡೆ ಅದು ಭೂ ಸುಧಾರಣೆಯ ಮಾತುಗಳನ್ನಾಡುತ್ತದೆ. ಮತ್ತೊಂದು ಕಡೆ ರಾಜ್ಯಗಳ ವಿಧಾನ ಸಭೆಗಳು ಮಂಜೂರಿಯಿತ್ತ ಮಸೂದೆಗಳನ್ನು ತಡೆಹಿಡಿಯುತ್ತಿದೆ. ಸಾಕ್ಷರತೆಯ ಕಾರ್ಯಕ್ರಮಗಳ ಕುರಿತು ಮಾತನಾಡುತ್ತಿರುವಾಗಲೇ, ಅದು ಕಾಂಗ್ರೆಸ್ಸೇತರ ಸರಕಾರಗಳು ಪ್ರಾಥಮಿಕ ಶಿಕ್ಷಣದ ಸಲುವಾಗಿ ಹೆಚ್ಚು ಹಣ ಮೀಸಲಾಗಿಡುವುದನ್ನು ಖಂಡಿಸುತ್ತದೆ.

ಕೇಂದ್ರದಲ್ಲಿ ಆಳುವ ಪಕ್ಷದ ಇಂಥ ಕೃತಿಗಳು ಮತ್ತು ಹಿಂದುಳಿದವರು, ಗುಡ್ಡಗಾಡು ಪ್ರದೇಶದ ಜನರು, ಆರ್ಥಿಕವಾಗಿ ಹಿಂದುಳಿದವರ ಮೇಲೆ ಹೆಚ್ಚಾಗುತ್ತಿರುವ ಅತ್ಯಾಚಾರಗಳಿಂದ ಗ್ರಾಮಾಂತರ ಪ್ರದೇಶದ ನಿರುದ್ಯೋಗಿಗಳ ಜೀವನ ದುಃಖದಾಯಕವಾಗಿದೆ. ಕಾಂಗ್ರೆಸ್ ಪಕ್ಷ ಸಮಾಜದಲ್ಲಿಯ ಬಲಹೀನ ಹಿಂದುಳಿದ ವರ್ಗದ ರಕ್ಷಕನೆಂದು ತೋರಿಸುತ್ತಿದ್ದರೂ ಕೂಡ, ಅದರಲ್ಲಿ ಕೆಳಗಿನಿಂದ ಮೇಲಿನವರೆಗೆ ದಬ್ಬಾಳಿಕೆ ನಡೆಸುವ ಜನರಿಂದಲೇ ಕೂಡಿದೆ. ಈ ವರ್ಗದ ಜನ ಪೋಲೀಸರ ಮತ್ತು ಆಡಳಿತೆಯ ಉಪಯೋಗ ಮಾಡಿಕೊಳ್ಳುವುದಷ್ಟೇ ಅಲ್ಲ, ತಮ್ಮದೇ ಆದ ಗುಂಡಾ ಜನರ ಖಾಸಗಿ ಸೈನ್ಯ ತಯಾರಿಸಿ, ಗ್ರಾಮಾಂತರ ಪ್ರದೇಶದ ಬಡಜನರು ಶಾಂತಿಯಿಂದ ಉಪಜೀವನ ನಡೆಸಿಕೊಂಡು ಹೋಗದಂತೆ ಮಾಡುತ್ತಾರೆ.

ಕೇಂದ್ರ ಸರಕಾರದ ನೀತಿಯ ಫಲವಾಗಿ, ಪಟ್ಟಣಗಳಲ್ಲಿ ಕೂಡಾ ಕಾರ್ಖಾನೆಗಳು ಮುಚ್ಚುವಿಕೆ ಲಾಕ್‌ಔಟ್‌ಗಳಿಂದಾಗಿ ಇಷ್ಟು ದಿವಸ ಉದ್ಯೋಗದಲ್ಲಿದ್ದವರನ್ನೆಲ್ಲ ನಿರುದ್ಯೋಗಿಗಳ ಸಾಲಿಗೆ ಸೇರಿಸುತ್ತಿದೆ. ಇಂಥ ಲಾಕೌಟ್ ಮತ್ತು ಮುಚ್ಚುವಿಕೆಯಿಂದಾಗಿಯೇ ಹೆಚ್ಚು ದುಡಿಯುವ ದಿನಗಳನ್ನು ಕಳೆದುಕೊಳ್ಳುವಂತಾಗಿದೆಂಬ ಸಂಗತಿಯನ್ನು ಸರಕಾರದ ಅಂಕೆ ಸಂಖ್ಯೆಗಳಿಂದ ತಿಳಿಯಬಹುದು. ಅಷ್ಟೇ ಅಲ್ಲ ಲೂಟಿ, ದರೋಡೆ, ಕೊಲೆ, ಬಡಪಾಯಿಗಳ ಸಾಮೂಹಿಕ ಹತ್ಯೆ, ಮಹಿಳೆಯರ ಮೇಲೆ ಅತ್ಯಾಚಾರ ಮುಂತಾದ ಸಮಾಜದ್ರೋಹಿ ಕೆಲಸ ಮಾಡುವವರಿಗೆಲ್ಲ ಪ್ರಭಾವಿ ವ್ಯಕ್ತಿಗಳ ಆಶ್ರಯ ಸಿಗುತ್ತಿದೆ. ನಮ್ಮ ದೇಶದ ಕೇಂದ್ರ ದಿಲ್ಲಿಯೇ ಈ ವಿಷಯದಲ್ಲಿ ಖ್ಯಾತಿ ಪಡೆದಿದೆ.

ಸಾಮಾನ್ಯ ಜನತೆ ಅತೀವ ಬೆಲೆ ಹೆಚ್ಚಳ ಮತ್ತು ಅಪಾರ ನಿರುದ್ಯೋಗದಿಂದ ಬಳಲುತ್ತಿರುವಾಗ, ಕಾಂಗ್ರೆಸ್ ಸರಕಾರ ಸಿರಿವಂತರ, ಮೇಲ್ವರ್ಗದ ಜನರ ಸೇವೆಗಾಗಿಯೂ, ಬಡವರ ಮೇಲೆ ಇನ್ನೂ ಹೆಚ್ಚು ಭಾರ ಹೇರುವುದರ ಸಲುವಾಗಿಯೂ ತನ್ನ ಅಧಿಕಾರವನ್ನು ಉಪಯೋಗಿಸುತ್ತಿದೆ.

ಎಕ್ಸೈಸ್ ಡ್ಯೂಟಿಯನ್ನು ಕಡಿಮೆ ಮಾಡಿ, ರೆಫ್ರಿಜರೇಟರ್ಸ್, ಕಾರು, ಟಿ. ವಿ. ಮುಂತಾದವುಗಳ ಬೆಲೆಯಲ್ಲಿ ಇಳಿತವಾಗುವಂತೆ ಮಾಡಿ, ದಿನಬಳಕೆಯ ವಸ್ತುಗಳಾದ ಅಕ್ಕಿ, ಸಕ್ಕರೆ, ಎಣ್ಣೆ, ಕಲ್ಲಿದ್ದಲು, ಔಷಧ ಮುಂತಾದವುಗಳ ಬೆಲೆಯನ್ನು ಹೆಚ್ಚಿಸುತ್ತಿದೆ. ಶ್ರೀಮಂತರ ಮೇಲೆ ಹೇರಲ್ಪಡುವ ಪ್ರತ್ಯಕ್ಷಕರಭಾರ ಇಳಿಸಿ, ಬಡ ಮತ್ತು ಮಧ್ಯಮ ವರ್ಗದ ಮೇಲೆ ಹೊರೆಯ ಅಪ್ರತ್ಯಕ್ಷಕರಗಳನ್ನು ಹೆಚ್ಚಿಸಿದೆ. ಸಾರ್ವಜನಿಕ ಆರ್ಥಿಕ ಸಂಸ್ಥೆಗಳ ಹಣವನ್ನು ಗುತ್ತೇದಾರರಿಗೆ ಮೀಸಲಾಗಿಟ್ಟಿದೆ. ಸಾರ್ವಜನಿಕರಿಗೆ ಬೇಕಾಗುವ ವಸ್ತುಗಳ ಉತ್ಪಾದನೆಗೆ ಆ ಹಣವನ್ನು ಉಪಯೋಗಿಸುತ್ತಿಲ್ಲ.

ಉತ್ಪಾದನೆ, ಬೆಲೆ ಮತ್ತು ಉದ್ಯೋಗ ರಂಗದಲ್ಲಿ ಉದ್ಭೂತವಾಗಿರುವ ಗಂಭೀರ ಪರಿಸ್ಥಿತಿಯೂ ಕಾಂಗ್ರೆಸ್ ಸರಕಾರ ಅನುಸರಿಸುತ್ತಾ ಬರುತ್ತಿರುವ ಆರ್ಥಿಕ ಧೋರಣೆಯ ಪೊಳ್ಳುತನವನ್ನು ಸಂಪೂರ್ಣ ಬಯಲಿಗೆಳೆದಿದೆ. ಸ್ವಾವಲಂಬನೆಯ ರಾಷ್ಟ್ರದ ಗುರಿಯಲ್ಲಿ ಒಂದರ ಹಿಂದೊಂದು ರಂಗದಲ್ಲಿ ಹಿಂಜರಿತವಾಗುತ್ತಿದೆ. ಮೂವತ್ತು ವರ್ಷಗಳ ಯೋಜನೆಯ ನಂತರ ಕೂಡ ಈ ದೇಶವನ್ನು ಆರ್ಥಿಕವಾಗಿ ಬೆಳೆಯುತ್ತಿರುವ ಆಧುನಿಕ ದೇಶವನ್ನಾಗಿ ಮಾರ್ಪಡಿಸುವುದರಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ. ಇಂಥ ಗಂಭೀರ ಪರಿಣಾಮಗಳಿಗೆ ಕಾರಣವಾದ ಧೋರಣೆಗಳಲ್ಲಿ ಬದಲಾವಣೆಯನ್ನು ತರುವುದರ ಬದಲಾಗಿ, ಅದೇ ದಿವಾಳಿಖೋರ ಪಥದಲ್ಲಿ ಮುಂದುವರಿಯಲು ಕೇಂದ್ರ ಒತ್ತಾಯಿಸುತ್ತಿದೆ. ಅಂಥ ಪಥದಲ್ಲಿ ಮುಂದುವರಿಕೆಯ ಕಾರಣದಿಂದಾಗಿ ನಮ್ಮ ದೇಶದ ಹೊರ ರಾಷ್ಟ್ರಗಳ ಸಾಲ ರೂ, 25,000 ಕೋಟಿಯಷ್ಟಾಗಿದೆ. ಈ ಸಾಲವನ್ನು ಮರುಪಾವತಿ ಮಾಡಲು ಹಲವಾರು ವರ್ಷ ಬೇಕಾಗಿದ್ದು, ಅಲ್ಲಿತನಕ ಅದು ನಮ್ಮ ದೇಶದ ಕುತ್ತಿಗೆಗೆ ಉರುಳಾಗಿಯೇ ಉಳಿಯುತ್ತದೆ.

ಈ ಧೋರಣೆಗಳೆಲ್ಲ ದುಡಿಯುವ ಜನತೆಯ ಸಂಕಷ್ಟವನ್ನು ಹೆಚ್ಚಿಸುತ್ತವೆ. ಜನರು ಅಪೇಕ್ಷೆ ಮಾಡುವಂತೆ ದೇಶದ ಮುಂದುವರಿಕೆಯಲ್ಲಿ ರಾಷ್ಟ್ರದ ಆರ್ಥಿಕತೆ ಕುಸಿದು ಬೀಳುತ್ತದೆ. ಕೆಲವೇ ದೊಡ್ಡ ಬಂಡವಾಳದಾರರು ಅಭಿವೃದ್ಧಿಗೊಳ್ಳುತ್ತಾರೆ.

ನಗರದ ಮತ್ತು ಗಾಮಾಂತರ ಪ್ರದೇಶದ ಮೇಲಿನ ಒಂದು ಸಣ್ಣ ವಿಭಾಗ ಸರಕಾರದ ಅಧಿಕಾರ ಯಂತ್ರದ ಹಿಡಿತ ಪಡೆಯುತ್ತದೆ. ಅದರಿಂದಾಗಿ ರಾಜಕೀಯ ಭ್ರಷ್ಟಾಚಾರ ಹೆಚ್ಚಾಗುತ್ತದೆ. ಕಳ್ಳ ಹಣದ ಪ್ರಭಾವ ಬಲಿಷ್ಟವಾಗುತ್ತದೆ, ಚುನಾವಣೆಯಲ್ಲಿ ಹಣದ ಪ್ರಭಾವ ಪ್ರಾಧಾನ್ಯವಾಗುತ್ತದೆ. ಇಂಥ ಬೆಳವಣಿಗೆಗಳು ತೀವ್ರ ಅಸಮಾಧಾನಕ್ಕೆ ಅವಕಾಶಮಾಡಿಕೊಡುತ್ತದೆ. ಅದನ್ನೆಲ್ಲ ಹತ್ತಿಕ್ಕಲು ಕಾಂಗ್ರೆಸ್ ಸರಕಾರ ದಮನಕಾರಿ ಮಾರ್ಗ ಅನುಸರಿಸುತ್ತಿದೆ. ರಾಷ್ಟ್ರೀಯ ಭದ್ರತಾ ಕಾನೂನು-ಅವಶ್ಯ ಸೇವೆಯ ಕಾಯಿದೆ ವಿಚಾರಣೆಯಲ್ಲದೆ ಬಂಧನ, ರೈತ—ಕಾರ್ಮಿಕ ಸಭೆ, ಹೋರಾಟಗಳ ಮೇಲೆ ಪ್ರತಿಬಂಧ—ಇವುಗಳನ್ನೆಲ್ಲ ಉಪಯೋಗಿಸಲಾಗುತ್ತಿದೆ.

ಆಳುವ ಪಕ್ಷ ಅನುಸರಿಸುತ್ತಿರುವ ಇಂಥ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳು ದೇಶವನ್ನು ಬಿಕ್ಕಟ್ಟಿಗೆ ಒಳಪಡಿಸಿವೆ. ಜಾತೀಯತೆ, ಮತೀಯತೆ, ಛಿದ್ರಕಾರಿ ಶಕ್ತಿಗಳೆಲ್ಲ

(7ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ :

– ಆರ್. ಚಂದ್ರ

ಮೂರು ದಶಕಗಳಲ್ಲಿ ನಾವು ಸಾಧಿಸಿದ್ದೇನು ?

ಎಂಟನೇ ಲೋಕಸಭೆಗಾಗಿ ಚುನಾವಣಾ ಪ್ರಚಾರ ಬಿರುಸಿನಿಂದ ಸಾಗುತ್ತಿದೆ. ಆಳುವ ಕಾಂಗ್ರೆಸ್ ಪಕ್ಷವು ಆರ್ಥಿಕ ಕ್ಷೇತ್ರದಲ್ಲಿ ತನ್ನ ಸಾಧನೆಯ ಕುರಿತು ಕೋಟಿಗಟ್ಟಲೆ ಹಣ ಸುರಿಸಿ ರಾಷ್ಟ್ರೀಯ ಪತ್ರಿಕೆಗಳಲ್ಲಿ ದಿನನಿತ್ಯವೂ ಪುಟಗಟ್ಟಲೆ ಜಾಹೀರಾತುಗಳನ್ನು ಪ್ರಕಟಿಸುತ್ತಿದೆ. ಆದರೆ, ಸತ್ಯಾಂಶವೇನು ? ಸ್ವಾತಂತ್ರ್ಯ ನಂತರ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಅಧಿಕಾರದಲ್ಲಿದ್ದ ನೆಹರು ಮತ್ತು ಇಂದಿರಾ ಕಾಂಗ್ರೆಸ್ ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿದ್ದೇನು ? ಪಕ್ಷದ ಕಾರ್ಯಕರ್ತರಿಗೂ, ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೂ, ಮತದಾರ ಬಾಂಧವರಿಗೂ ಸತ್ಯಾಂಶ ತಿಳಿಯಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ "ಪೀಪಲ್ಸ ಡೆಮೊಕ್ರೆಸಿ" ವಾರ ಪತ್ರಿಕೆಯಲ್ಲಿ ಇತ್ತೀಚೆಗೆ ವಿಶೇಷ ಲೇಖನ ಪ್ರಕಟಿಸಲಾಗಿದೆ. ಅದರ ಆಧಾರದಲ್ಲಿ ಈ ಸಮೀಕ್ಷೆಯನ್ನು ಸಂಗ್ರಹಿಸಲಾಗಿದೆ.

ಬಡತನದ ಅಪಮಾನತೆ

ಮೂರು ದಶಕಗಳ ಕಾಲದ ಯೋಜನಾ ಬದ್ಧವೆಂದು ಹೇಳಿಕೊಳ್ಳುವ ಆರ್ಥಿಕ ಅಭಿವೃದ್ಧಿಯ ನಂತರವೂ, ಭಾರತವು ಪ್ರಪಂಚದಲ್ಲಿಯೇ ಅತ್ಯಂತ ದಯನೀಯ ಬಡ ರಾಷ್ಟ್ರಗಳಲ್ಲಿ ಒಂದಾಗಿ ಉಳಿದಿದೆ.! ಗತವರ್ಷಗಳ ತೋರಿಕೆಯ ಆರ್ಥಿಕ ಯೋಜನಾ ಅವಧಿಯಲ್ಲಿ ರಾಷ್ಟ್ರೀಯ ಉತ್ಪನ್ನದ ವೈಯಕ್ತಿಕ ಸರಾಸರಿ ದರವು ಅತ್ಯಂತ ಕೆಳಮಟ್ಟದಲ್ಲಿದ್ದುದೇ ಅಲ್ಲದೆ, ಉತ್ಪಾದನೆಯ ವಿತರಣೆಯೂ ತೀರಾ ಅಸಮಾನತೆಯದ್ದಾಗಿತ್ತು. ಪರಿಣಾಮವಾಗಿ, ಬಹಳ ಪ್ರಮಾಣದ ಜನಕೋಟಿಯ ಜೀವನ ಮಟ್ಟವು ನಿಮ್ನಳವಾಗಿ ಹೆಚ್ಚಾಗಲಿಲ್ಲ, ಬದಲು ಅವರಲ್ಲಿನ ಹಲವು ವಿಭಾಗಗಳ ಜನರ ಜೀವನ ಮಟ್ಟವು ನಿಮ್ನಳವಾಗಿ ಇಳಿಮುಖವಾಗಿರುವುದನ್ನು ಗಮನಿಸಬಹುದು.

ಇದರಲ್ಲಿ ಆಶ್ಚರ್ಯವೇನಿಲ್ಲ. ಒಂದು ಕಡೆಯಿಂದ ಸಂಪತ್ತು ಸೃಷ್ಟಿಸುತ್ತಾ ಹೋದಂತೆ, ಇನ್ನೊಂದು ಕಡೆಯಿಂದ ಬಡವರ ದಾರಿದ್ರ್ಯ ಸೃಷ್ಟಿಸುತ್ತಾ ಹೋಗುವುದು ಬಂಡವಾಳ ಶಾಹಿ ಆರ್ಥಿಕ ಅಭಿವೃದ್ಧಿಯ ಸಹಜ ಗುಣವೇ ಆಗಿದೆ. ಅಷ್ಟೇ ಅಲ್ಲದೆ ಒಂದೂವರೆ ಶತಮಾನಗಳ ಕಾಲದ ವಸಾಹತು ಶೋಷಣೆಗೊಳಗಾದ ನಮ್ಮ ದೇಶದಲ್ಲಿ ಮಾಡಿದಂತೆ, ಬಂಡವಾಳಶಾಹಿ ಪದ್ಧತಿಯನ್ನು ಅದರ ಭೂತಪೂರ್ವ ಸಂಬಂಧದ ಮೇಲೆಯೇ ಹೇರಿದರೆ, ಪ್ರಾರಂಭದಲ್ಲಿಯೇ ಬಡತನದ ತಳಪಾಯ ವಿಶಾಲವಾಗಿರುವುದು. ಮುಂದೆ, ಬಂಡವಾಳಶಾಹಿ ಪದ್ಧತಿಯಲ್ಲಿ ಮುಂದಗತಿಯ ಅಭಿವೃದ್ಧಿಯಿಂದಾಗಿ ಮತ್ತು ಜೊತೆಗೇ ಹೆಚ್ಚುತ್ತಿರುವ ನಿರ್ಗತಿಕೆಯಿಂದಾಗಿ, ಪ್ರಾರಂಭದ ಬಡತನದ ತಳ ಪಾಯವು ಇನ್ನಷ್ಟು ವಿಸ್ತರಿಸುತ್ತಾ ಹೋಗುವುದು. ಅಭಿವೃದ್ಧಿಯ ಕುರಿತಾದ ಕೆಲವು ಅಧಿಕೃತ ಅಂಕೆ ಸಂಖ್ಯೆಗಳಿಂದಲೇ ಈ ಸತ್ಯದ ಅರಿವಾಗುವುದು

ಮಂದಗತಿ ಅಭಿವೃದ್ಧಿ

1950-51 ರಿಂದ 1982-83ರ ಅವಧಿಯಲ್ಲಿ ರಾಷ್ಟ್ರೀಯ ಒಟ್ಟು ಉತ್ಪಾದನೆಯು (GNP) 1970-71 ರ ಸ್ಥಿರ ಬೆಲೆಯಲ್ಲಿ ವಾರ್ಷಿಕ ಶೇ 3.6 ರಷ್ಟೇ ಏರಿಕೆಯ ದರದಲ್ಲಿ ಹೆಚ್ಚಾಯಿತು. ವಸಾಹತು ಆಳ್ವಿಕೆಯ ಕೊನೆಯ 50 ವರ್ಷಗಳಿಗೆ ಹೋಲಿಸಿದರೆ, ಸ್ವಾತಂತ್ರ್ಯದ ನಂತರ ಅಭಿವೃದ್ಧಿಯು ಸಮಾಧಾನಕರ ಎಂದು ಕಂಡು ಬಂದರೂ, ಬೃಹತ್ ಆರ್ಥಿಕ ಸಮಸ್ಯೆಗಳನ್ನು ಪರಿ ಹರಿಸಬೇಕಾದ ನಮ್ಮ ಬಡ ದೇಶದ ಯೋಜನಾಬದ್ಧವಾದ ಆರ್ಥಿಕ ಪ್ರಗತಿಯು ಇದುವರೆಗೆ ತೀರಾ ಕಡಿಮೆ ಎಂದೇ ಹೇಳಬೇಕು. ರಾಷ್ಟ್ರೀಯ ಉತ್ಪಾದನೆಯ ಸಿಂಹ ಪಾಲು ಹೊಸ ಬಂಡವಾಳ ಹೂಡುವಿಕೆಗೂ ಸರ್ಕಾರದ ವೆಚ್ಚಕ್ಕೂ ವಿನಿಮಯವಾಗುವುದರಿಂದ, ಪ್ರತಿಯೊಬ್ಬ ಭಾರತೀಯನ ವಾರ್ಷಿಕ ಸರಾಸರಿ ಆದಾಯದ (PENI) ಹೆಚ್ಚಳದ ದರವು ಕೇವಲ ಶೇ 1.4 ರಷ್ಟಕ್ಕೇ ಸ್ಥಗಿತಗೊಂಡಿದೆ. ಆದರೆ ಇದೇ ಅವಧಿಯಲ್ಲಿ ಸಮಾಜವಾದಿ ಚೀನಾದಲ್ಲಿ ಪ್ರತಿಯೊಬ್ಬ ಪ್ರಜೆಯ ವಾರ್ಷಿಕ ಸರಾಸರಿ ಆದಾಯವೂ ಶೇ 5ರ ದರದಲ್ಲಿ ಹೆಚ್ಚಿದೆ. ಎರಡು ವಿವಿಧ ಸಾಮಾಜಿಕ ವ್ಯವಸ್ಥೆಗಳೊಳಗಿನ ಅಂತರವು ಇದರಿಂದ ಸ್ಪಷ್ಟವಾಗುವುದು.

ವಾರ್ಷಿಕ ಸರಾಸರಿ ಆದಾಯವು ಆರ್ಥಿಕ ಪ್ರಗತಿಯ ಸ್ಪಷ್ಟ ಚಿತ್ರಣವನ್ನು ಕೊಡಲಾರದು. ಕಾರಣ, ಈ ಸರಾಸರಿಯಲ್ಲಿ ಚೋಮನಂತಹ ದಟ್ಟ ದರಿದ್ರನ ಹಾಗೂ ಟಾಟಾನಂತಹ ಅಗರ್ಭ ಶ್ರೀಮಂತನ ಆದಾಯವೂ ಸೇರಿದೆ. ಮೇಲಾಗಿ, ದೇಶದ ಉತ್ಪಾದನಾ ಶಕ್ತಿಯನ್ನು ತಿಳಿಯಬೇಕಾದರೆ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳ ಅಭಿವೃದ್ಧಿಯನ್ನು ಪರಿಶೀಲಿಸಬೇಕು. [ಕೋಷ್ಟಕ : 2] ಕಳೆದ ಮೂರು ದಶಕಗಳಲ್ಲಿ ಕೃಷಿ ಉತ್ಪಾದನೆಯ ವಾರ್ಷಿಕ ಅಭಿವೃದ್ಧಿ ದರವು ಕೇವಲ ಶೇ 2.8 ರಷ್ಟೇ ಆಗಿತ್ತು. "ಹಸಿರು ಕ್ರಾಂತಿ" ಹಾಗೂ ಇತರ ತುರ್ತು ಕಾರ್ಯಕ್ರಮಗಳಿಂದಲೂ ಕೃಷಿ ಉತ್ಪಾದನೆಯನ್ನು ಜನ ಕೋಟಿಯ ಅಗತ್ಯತೆಗೆ ಸರಿಗಟ್ಟುವಷ್ಟು ಹೆಚ್ಚಿಸಲು ಸಾಧ್ಯವಾಗಲಿಲ್ಲ. ಜನ ಸಂಖ್ಯೆ ಹೆಚ್ಚಳದ ದರಕ್ಕಿಂತ ಸ್ವಲ್ಪ ಏರಿಕೆಯ ದರದಲ್ಲಿ ಕೃಷಿ ಉತ್ಪಾದನೆಯು ಹೆಚ್ಚಾದರೂ ಜನ ಜೀವನ ಮಟ್ಟ ಹೆಚ್ಚಿಸಲು ಸಾಧ್ಯವಾಗಲಿಲ್ಲ. ಕೈಗಾರಿಕಾ ಉತ್ಪಾದನೆಯು 1971 ರಿಂದ 1983ರ ಅವಧಿಯಲ್ಲಿ ಶೇ 4.4ರ ದರದಲ್ಲಿ ಹೆಚ್ಚಿದರೂ, ಪ್ರತಿ ಪ್ರಜೆಯ ವಾರ್ಷಿಕ ಸರಾಸರಿ ಕೈಗಾರಿಕಾ ಉತ್ಪಾದನಾ ಹೆಚ್ಚಳದ ದರವು ಕೇವಲ ಶೇ 2ರಷ್ಟೇ ಆಗಿದೆ. ಈ ಮಂದಗತಿಯ ಕೈಗಾರಿಕಾ ಅಭಿವೃದ್ಧಿಯಿಂದ ಭಾರತವು ಆಧುನಿಕ ಕೈಗಾರಿಕಾ ರಾಷ್ಟ್ರವಾಗಿ ಬೆಳೆದು ಬರಬೇಕಾದರೆ ಕೆಲವು ಶತಮಾನಗಳೇ ಬೇಕಾದೀತು ! ವರ್ಷ ವರ್ಷಕ್ಕೆ ಕೇವಲ ಸರ್ಕಾರದ ಖರ್ಚು ವೆಚ್ಚಗಳು ಹೆಚ್ಚುತ್ತಿದ್ದ ಮಾತ್ರಕ್ಕೆ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳು ನಿರೀಕ್ಷಿಸಿದ ದರದಲ್ಲಿ ಈಗಿನ ವ್ಯವಸ್ಥೆಯಲ್ಲಿ ಹೆಚ್ಚಾಗಲಾರವು ಎಂಬುದಕ್ಕೆ ನಮ್ಮ ದೇಶವೇ ಸಾಕ್ಷಿ.

ಅನುಭೋಗ, ಜೀವನಮಟ್ಟ :

ಭಾರತದ ಜನಕೋಟಿಗೆ ಜೀವನಾವಶ್ಯಕ ವಸ್ತುಗಳು ಅನುಭೋಗಕ್ಕೆ ಸಾಕಷ್ಟು ಸಿಗುತ್ತಿಲ್ಲ. ಪರಿಣಾಮವಾಗಿ ಅವರ ಜೀವನ ಮಟ್ಟವೂ ಸ್ಥಗಿತಗೊಂಡಿದೆ. 1956 ರಿಂದ 1983ರ ಅವಧಿಯಲ್ಲಿ ಆಹಾರ ಧಾನ್ಯಗಳ, ಬೇಳೆಕಾಳುಗಳ, ಹತ್ತಿ ಬಟ್ಟೆಯ ವಾರ್ಷಿಕ ಸರಾಸರಿ ಲಭಿಸುವಿಕೆಯ ಅಂಕಿ ಸಂಖ್ಯೆಗಳನ್ನು ಕೋಷ್ಟಕ 3 ರಲ್ಲಿ ಕೊಡಲಾಗಿದೆ. ಸರಾಸರಿ ದೊರಕುವ ಒಟ್ಟು ಆಹಾರ ಧಾನ್ಯಗಳು 1965ರಲ್ಲಿ 480.2 ಗ್ರಾಂ [ದಿನಕ್ಕೆ] ಆಗಿದ್ದರೆ, ನಂತರದ ವರ್ಷಗಳಲ್ಲಿ ಆ ಮಟ್ಟದಿಂದ ಇಳಿಮುಖವಾಗುತ್ತಲೇ ಇದೆ. ಈಗಂತೂ ಆಹಾರ ಧಾನ್ಯಗಳ ಆಮದೂ ನಿಂತುಬಿಟ್ಟಿದೆ. ಬದಲು ಸ್ವಲ್ಪ ಮಟ್ಟಿಗೆ ರಫ್ತು ಮಾಡಲು ಪ್ರಾರಂಭವಾಗಿದೆ. ಪರಿಣಾಮವಾಗಿ ಅಲ್ಪ ಸ್ವಲ್ಪ ಕೃಷಿ ಉತ್ಪಾದನೆಯ ಹೆಚ್ಚಳದ ಪ್ರತಿಫಲವೂ ಜನಸಾಮಾನ್ಯರಿಗೆ ದೊರೆಯದಾಗಿದೆ. ವಾರ್ಷಿಕ ಸರಾಸರಿ ಬಟ್ಟೆ ದೊರೆಯುವಿಕೆಯೂ 14.4 ಮೀಟರಿನಿಂದ (1956) 9.9 ಮೀಟರಿಗಿಳಿದಿದೆ(1982)ಆ ಜೀವನಾವಶ್ಯಕ ವಸ್ತುಗಳ ದೊರೆಯುವಿಕೆಯ ಅಂಕಿ ಸಂಖ್ಯೆಗಳಿಂದ ಜೀವನ ಮಟ್ಟವನ್ನು ಪೂರ್ಣ ತಿಳಿಯಲು ಸಾಧ್ಯವಿಲ್ಲ. ಜೀವನಾವಶ್ಯಕ ವಸ್ತುಗಳ ಉತ್ಪಾದನೆಯು ವಿತರಣೆಗೆ ಮಾರುಕಟ್ಟೆಗೆ ಬರಬೇಕು. ಅಲ್ಲಿ ಅವುಗಳನ್ನು ಕೊಂಡುಕೊಳ್ಳಲು ಜನಸಾಮಾನ್ಯರಲ್ಲಿ ಗ್ರಾಹಕ ಶಕ್ತಿಬೇಕು ಅಂದರೆ ಸಾಕಷ್ಟು ಅವರಿಗೆ ಆದಾಯ ಇರಬೇಕು. ಆದಾಯವಿರಬೇಕಾದರೆ. ಉದ್ಯೋಗವಿರಬೇಕು. ಜೀವನಾವಶ್ಯಕ ವಸ್ತುಗಳ ಬೆಲೆಗಳು ಅವರ ಗ್ರಾಹಕ ಶಕ್ತಿಗೆ ನಿಲುಕುವಷ್ಟಿರಬೇಕು. ಬೆಲೆ ಏರಿಕೆ, ಹಣದುಬ್ಬರ ಹಾಗೂ ನಿರುದ್ಯೋಗ ನಿರಂತರವಾಗಿ ಹೆಚ್ಚುತ್ತಿರುವುದರಿಂದ ಜೀವನಾವಶ್ಯಕ ವಸ್ತುಗಳು ಜನಕೋಟಿಗೆ ಸಾಕಷ್ಟು ಪಡೆಯಲಾಗದಿದ್ದುದರಿಂದ ಅವರ ಜೀವನ ಮಟ್ಟವು ಕುಸಿಯುತ್ತಿದೆ.

ಮೂಲತಃ ಜನಸಂಖ್ಯೆಯಲ್ಲಿ ಆಹಾರ ಸೇವನೆಯ ಶಕ್ತ್ಯಾಂಶದಲ್ಲಿ(ಕೆಲೋರಿಗಳಲ್ಲಿ) ವ್ಯತ್ಯಾಸವಿದೆ. ಭಾರತೀಯರ ಸರಾಸರಿ ಕೆಲೋರಿ ಸೇವನೆಯನ್ನು ಪರಿಶೀಲಿಸಿದರೂ (ಕೋಷ್ಟಕ: 4), ನಮ್ಮ ದೇಶವು ಚೀನಾ, ಶ್ರೀಲಂಕಾ, ಕಡಿಮೆ — ಮಧ್ಯಮ ಆದಾಯದ ದೇಶಗಳಿಗಿಂತಲೂ ಹಿಂದುಳಿದಿರುವುದನ್ನು ಗಮನಿಸಬಹುದು. ನಾವು ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದ್ದೇವೆ ಎಂದು ಇತ್ತೀಚೆಗೆ ಹೇಳಿಕೊಳ್ಳಲಾಗುತ್ತಿದೆ. ಆಹಾರ ಆಮದು ಮಾಡಿಕೊಳ್ಳದಿದ್ದ ಮಾತ್ರಕ್ಕೆ ಅಥವಾ ಸ್ವಲ್ಪ ಆಹಾರ ರಫ್ತು ಮಾಡಿದ ಮಾತ್ರಕ್ಕೆ ಸ್ವಾವಲಂಬನೆ ಸಾಧಿಸಿದಂತಾಗಲಿಲ್ಲ. 1980 ರಲ್ಲಿ ಭಾರತದ ಜನರ ಸರಾಸರಿ ಆಹಾರ ಕೆಲೋರಿ ಸೇವನೆಯು 1880 ಆದರೆ, ಆಹಾರ ಆಮದು ಮಾಡಿಕೊಳ್ಳುವ ಯುರೋಪಿನ ಸಮಾಜವಾದಿ ದೇಶಗಳ ಪ್ರಜೆಗಳ ದೈನಿಕ ಆಹಾರ ಸೇವನೆಯ ಕೆಲೋರಿಯು 3412 ರಷ್ಟಾಗಿರುವುದನ್ನು ಗಮನಿಸಬೇಕು. ಭಾರತದ ಜನರ ಸರಾಸರಿ ಆಹಾರ ಸೇವನೆಯ ಕೆಲೋರಿಯು ಜೀವನಾವಶ್ಯಕತೆಯ ಶೇ 87 ರಷ್ಟೇ ಆಗಿರುವುದರಿಂದ, 1980 ರಲ್ಲಿಯೂ, 30 ವರ್ಷಗಳ ಯೋಜನಾಬದ್ಧ ಆರ್ಥಿಕ ಅಭಿವೃದ್ಧಿಯ ನಂತರವೂ, ಶೇ 50 ಕ್ಕೂ ಹೆಚ್ಚು ಜನಸಂಖ್ಯೆ ಬಡತನದ ರೇಖೆಯ ಕೆಳಮಟ್ಟದಲ್ಲಿಯೇ ಇದ್ದಾರೆ. ಇತ್ತೀಚಿಗೆ ನಮ್ಮ ಯೋಜನಾಗಾರರು ಬಡತನದ ಲೆಕ್ಕ ತಪ್ಪಿಸುವ ಹಲವು ತಂತ್ರಗಳಲ್ಲಿ ನಿರತರಾಗಿದ್ದಾರೆ, ಬಡತನ ಹೋಗಲಾಡಿಸುವುದರಲ್ಲಿ ಅಲ್ಲ !

ಅಕ್ಷರತೆ, ಆರೋಗ್ಯ :

ಆಹಾರದಲ್ಲಿ ಬಡತನ ಇಳಿಮುಖವಾಗದಿದ್ದರೂ, 'ಅಕ್ಷರತೆ' ಯಲ್ಲಿ 'ಆರೋಗ್ಯ' ದಲ್ಲಿ ಬಡತನ ಇಳಿಮುಖವಾಗುತ್ತಿದೆ ಎಂದು ಕಾಂಗ್ರೆಸ್ ಸರಕಾರದ ಪ್ರಚಾರಕರು ಸಾಧಿಸುತ್ತಿದ್ದಾರೆ. ಈ ಕ್ಷೇತ್ರಗಳಲ್ಲಿಯೂ ಭಾರತದ ಪ್ರಗತಿ ನಿಧಾನವಾಗಿದೆ (ಕೋಷ್ಟಕ: 5,6). ಸ್ವಾತಂತ್ರ್ಯ ದೊರಕಿ 37 ವರ್ಷಗಳಾದರೂ, ಭಾರತದ ಮೂರನೇ ಎರಡರಷ್ಟು ವಯಸ್ಕರು ಇನ್ನೂ ನಿರಕ್ಷರಸ್ಥರಾಗಿದ್ದಾರೆ. 6 ರಿಂದ 14 ವರ್ಷಗಳ ಒಳಗಿನ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಗುರಿಯು ಸಂವಿಧಾನದಲ್ಲಿ ಉಲ್ಲೇಖಿಸಿದಂತೆ 1960 ರಲ್ಲಿಯೇ ಸಾಧಿಸಬೇಕಾಗಿತ್ತು. ಆದರೆ ಕಾಂಗ್ರೆಸ್ ಈ ಗುರಿಯನ್ನು 1990 ರಷ್ಟರಲ್ಲಿ ಸಾಧಿಸುವುದೆಂದು ಪ್ರಸಕ್ತ ಲೋಕಸಭಾ ಚುನಾವಣೆ ಘೋಷಣೆಯಲ್ಲಿ ಆಶ್ವಾಸನೆ ಕೊಟ್ಟಿದೆ. ವರ್ಷ ವರ್ಷಕ್ಕೂ ಅಭಿವೃದ್ಧಿಯ ನೆಪದಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದರೂ, ಅಕ್ಷರತೆಯಲ್ಲಿ ಭಾರತ ಅತ್ಯಂತ ಹಿಂದುಳಿದಿದೆ. 1960 ರಿಂದ 1980ರ ಇಪ್ಪತ್ತು ವರ್ಷಗಳ ಅವಧಿಯಲ್ಲಿ ವಯಸ್ಕರ ಅಕ್ಷರತೆಯು ಭಾರತದಲ್ಲಿ ಶೇ 28 ರಿಂದ 36ಕ್ಕೇರಿದರೆ, ಚೀನಾದಲ್ಲಿ ಶೇ. 43 ರಿಂದ ಶೇ 69ಕ್ಕೇರಿತು. ವಿಯಟ್ನಾಂನಲ್ಲಿ ಶೇ 87ಕ್ಕೇರಿತು. ಸಮಾಜವಾದಿ ದೇಶಗಳಲ್ಲಿ ಅಕ್ಷರತೆಯು ಶೇ 99 ರಷ್ಟಾಗಿರುವುದನ್ನು ಗಮನಿಸಿದರೆ, ಕೆಲವೇ ದಶಕಗಳಲ್ಲಿ ಇವುಗಳ ಸಾಧನೆಯು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳ ಎರಡು ಶತಮಾನಗಳ ಸಾಧನೆಗೆ ಸರಿದೂಗಿರುವುದನ್ನು ಗಮನಿಸಬಹುದು !

ಆರೋಗ್ಯದಲ್ಲಿಯೂ ಭಾರತದ ಪ್ರಗತಿ ಬಹಳ ಹಿಂದುಳಿದಿದೆ. ಭಾರತೀಯರ ಸರಾಸರಿ ಜೀವನ ಆಯುಷ್ಯ 1960 ರಿಂದ 1981ರ ಅವಧಿಯಲ್ಲಿ 43 ವರ್ಷಗಳಿಂದ 52 ವರ್ಷಗಳಿಗೇರಿತು. ಚೀನಾದಲ್ಲಿ ಇದೇ ಅವಧಿಯಲ್ಲಿ 41 ವರ್ಷಗಳಿಂದ 67 ವರ್ಷಗಳಿಗೇರಿತು. ಭಾರತದಲ್ಲಿ ಮಕ್ಕಳ ಮರಣ ಪ್ರತಿ ಸಾವಿರಕ್ಕೆ 1981 ರಲ್ಲಿ 121 ಆದರೆ,ಚೀನಾದಲ್ಲಿ 71ಕ್ಕಿಳಿದಿದೆ. 1960ರಲ್ಲಿ ಚೀನಾದಲ್ಲಿ ಪ್ರತಿ ಒಬ್ಬ ಡಾಕ್ಟರ್ 8300 ಜನರಿಗೆ ಶುಶ್ರೂಷೆ ಮಾಡಬೇಕಾಗಿದ್ದರೆ, 1980 ರಲ್ಲಿ 1920 ಜನರಿಗೆ ಒಬ್ಬರಂತೆ ಡಾಕ್ಟರ್‌ಗಳಿದ್ದಾರೆ. ಭಾರತದಲ್ಲಿ ಈ ಅವಧಿಯಲ್ಲಿ 4850 ಜನರಿಗೆ ಒಬ್ಬ ಡಾಕ್ಟರಿನಿಂದ 3640 ಜನರಿಗೆ ಒಬ್ಬ ಡಾಕ್ಟರ್ ಸಿಗುವಂತಾಗಿದೆ. ಪೂರ್ವ ಯೂರೋಪಿನ ಸಮಾಜವಾದಿ ರಾಷ್ಟ್ರಗಳಲ್ಲಿ 1980ರಲ್ಲಿ ಪ್ರತಿ 356 ಜನರಿಗೆ ಒಬ್ಬ ಡಾಕ್ಟರನ ಸೇವಾ ಸೌಲಭ್ಯ ದೊರೆಯುವುದು. ಈ ಪ್ರಗತಿ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಿಗಿಂತಲೂ ಮಿಗಿಲಾಗಿದೆ. ಆರೋಗ್ಯ ಸೌಲಭ್ಯದ ಗುಣಮಟ್ಟವನ್ನು ಹೋಲಿಸಿದರೂ ಭಾರತವು ಸಮಾಜವಾದಿ ಚೀನಾ ಹಾಗೂ ಸಮಾಜವಾದಿ ಪೂರ್ವ ಯುರೋಪಿಗಿಂತ ಬಹಳ ಹಿಂದುಳಿದಿದೆ.

ಒಟ್ಟನಲ್ಲಿ, ಅಭಿವೃದ್ಧಿಯ ಯಾವ ಅಂಕೆ ಸಂಖ್ಯೆಗಳನ್ನು ಪರಿಶೀಲಿಸಿದರೂ 'ದೀರ್ಘ' ಕಾಲದ ಯೋಜನಾ ಬದ್ಧವೆಂದು ಹೇಳಿಕೊಳ್ಳುತ್ತಿರುವ ಆರ್ಥಿಕ ಅಭಿವೃದ್ಧಿ ಆಗಿಯೂ, ಭಾರತದ ಜನಕೋಟಿ ಇನ್ನೂ ಭೌತಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಬಡತನದಲ್ಲಿದೆ. ನಮ್ಮ ಜನರು ಅನಾರೋಗ್ಯ ಅನಕ್ಷರತೆ, ಹಸಿವು, ಇತ್ಯಾದಿಗಳಿಂದ ಇನ್ನೂ ಮುಕ್ತರಾಗಲಿಲ್ಲ.

ಕೋಷ್ಟಕಗಳನ್ನ 6ನೇ ಪುಟದಲ್ಲಿ ನೋಡಿ

ದೇಶದ ಮತದಾರರಿಗೆ ಕರೆ

ಆಶ್ವಾಸನೆ ಪೂರೈಸುವ ಬದಲು ಸಂಕಷ್ಟಗಳನ್ನೇ ಹೊರಿಸಿರುವ ಕಾಂಗ್ರೆಸ್ (ಐ)ನ್ನು ಅಧಿಕಾರದಿಂದ ಇಳಿಸಿ

– ಕಾ|| ಹರಿಕಿಶನ್ ಸಿಂಗ್ ಸುರ್ಜೀತ್

"ಕಾಂಗ್ರೆಸ್ (ಐ) ನ್ನು ಮತ್ತೆ ಅಧಿಕಾರಕ್ಕೆ ತಂದರೆ ಅದೊಂದು ಅನಾಹುನಾಗುತ್ತದೆ. ಕಾಂಗ್ರೆಸ್ (ಐ) ನ್ನು ಅಧಿಕಾರದಿಂದ ಇಳಿಸಿ ಅದರ ಸ್ಥಾನದಲ್ಲಿ ಎಡಶಕ್ತಿಗಳ ಮಿತ್ರತ್ವ ಹೊಂದಿರುವ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಕೂಟವೊಂದನ್ನು ತರಬೇಕಾಗಿದೆ" ಎಂದು ಪಾಲಿಟ್ ಬ್ಯೂರೋ ಸದಸ್ಯ ಕಾಂ. ಹರಿಕಿಶನ್‌ಸಿಂಗ್ ಸುರ್‌ಜೀತ್ ಹೇಳಿದ್ದಾರೆ. ಅವರು ಡಿಸೆಂಬರ್ 17 ರಂದು ದೂರದರ್ಶನದ ಮೂಲಕ ಸಿ.ಪಿ.ಎಂ. (ಎಂ) ಪರವಾಗಿ ದೇಶದ ಮತದಾರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ತಮ್ಮ ಭಾಷಣದ ಕಾಂ. ಸುರ್‌ಜೀತ್ ಕಾಂಗ್ರೆಸ್ (ಐ) ನ್ನು ಏಕೆ ಅಧಿಕಾರದಿಂದ ಕೆಳಗಿಳಿಸಬೇಕು ಎಂಬುದಕ್ಕೆ ಬಲವಾದ ಕಾರಣಗಳನ್ನು ಒಂದೊಂದಾಗಿ ತರ್ಕಬದ್ಧವಾಗಿ ಮತದಾರರೆದುರು ಮಂಡಿಸಿದರು. 1980 ರಲ್ಲಿ ಕಾಂಗ್ರೆಸ್ (ಐ) ಬಡತನ ತೊಲಗಿಸುವ ಬೆಲೆ ಇಳಿಸುವ, ಆಡಳಿತವನ್ನು ಸುಧಾರಿಸಿ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವ, ದುರ್ಬಲ ವರ್ಗಗಳ ಜೀವ ಮತ್ತು ಆಸ್ತಿಗಳನ್ನು ರಕ್ಷಿಸುವ ಹೀಗೆ ಹಲವಾರು ವಾಗ್ದಾನಗಳನ್ನು ನೀಡಿ ಅಧಿಕಾರ ಮರಳಿ ಪಡೆದಿತ್ತು ಆದರೆ ಈಗ ಐದು ವರ್ಷಗಳಲ್ಲಿ ಈ ವಾಗ್ದಾನಗಳನ್ನು ಪೂರೈಸುವ ಮಾತಂತಿರಲಿ, ಬದಲಿಗೆ ಅಸಹನೀಯ ಸಂಕಷ್ಟಗಳ ದೊಡ್ಡ ಹೊರೆಯನ್ನೇ ಜನಸಾಮಾನ್ಯರ ಮೇಲೆ ಅದು ಹೊರಿಸಿದೆ.

ಆರ್ಥಿಕ ರಂಗದಲ್ಲಿ ಕಾಂಗ್ರೆಸ್ (ಐ) ನ ಕಳೆದ ಐದು ವರ್ಷಗಳ ದಾಖಲೆಗಳನ್ನು ಪರಿಶೀಲಿಸುತ್ತಾ ಕಾಂ. ಸುರಜೀತ್ ಕಾಂಗ್ರೆಸ್ (ಐ) ಕೇಂದ್ರ ಸರಕಾರ ಹೇಗೆ ಬೆಲೆಗಳನ್ನು ಹಲವು ಬಾರಿ ತಾನೇ ಏರಿಸಿ, ಅವಶ್ಯಕ ಆಹಾರ ಸಾಮಗ್ರಿಗಳು ಜನಸಾಮಾನ್ಯರ ಎದುರಿಗೆ ಸಿಲುಕದಂತೆ ಮಾಡಿ ಅವರನ್ನು ವಂಚಿಸಿದೆಯೆಂಬುದನ್ನು ಅಂಕಿ–ಅಂಶಗಳ ಮೂಲಕ ವಿವರಿಸಿದರು. ನಿರುದ್ಯೋಗ ಸಮಸ್ಯೆಯು ತೀವ್ರತೆಯ ಬಗ್ಗೆ ಹೇಳುತ್ತಾ— "ಈಗ ಎಪ್ಪತ್ತು ಕೋಟಿ ಜನತೆಯಲ್ಲಿ 10 ಶೇಕಡಾ ಜನತೆ ಕೆಲಸವಿಲ್ಲದಂತಾಗಿದ್ದಾರೆ, ಜೀವನೋಪಾಯಕ್ಕೆ ಯಾವುದೇ ಮಾರ್ಗ ಕಾಣದಾಗಿದ್ದಾರೆ" ಎಂಬ ಕಟು ವಾಸ್ತವತೆಯನ್ನು ಮತದಾರರ ಗಮನಕ್ಕೆ ತಂದರು.

ಶೋಚನೀಯ ಗ್ರಾಮೀಣ ಸ್ಥಿತಿ

ಕೃಷಿ ರಂಗದಲ್ಲೂ ಕಾಂಗ್ರೆಸ್ [ಐ] ಕೇಂದ್ರ ಸರಕಾರದ ಧೋರಣೆಗಳು ಶೋಚನೀಯ ಪರಿಸ್ಥಿತಿ ಉಂಟು ಮಾಡಿವೆ ಎಂಬುದನ್ನು ಕಾಂ. ಸುರಜೀತ್ ಉದಾಹರಣೆ ಸಹಿತ ವಿವರಿಸಿದರು. ಕೃಷಿ ಸಲಕರಣೆಗಳ, ಸಾಮಗ್ರಿಗಳ ಬೆಲೆ ಜಾಸ್ತಿಯಾಗಿದ್ದರೂ ರೈತರಿಗೆ ತಮ್ಮ ಬೆಳೆಗೆ ಸೂಕ್ತ ಬೆಲೆ ಸಿಕ್ಕದಂತಾಗಿದೆ. ಗ್ರಾಮೀಣ ಋಣಭಾರ 13 ಸಾವಿರ 750 ಕೋಟಿ ರೂಗಳು. ಇದರಲ್ಲಿ ಶೇಖಡಾ ಅರವತ್ತು ಲೇವಾದೇವಿಗಾರರಿಂದ ಪಡೆದ ವಿಪರೀತ ಬಡ್ಡಿಯ ಸಾಲ ಕಾರ್ಮಿಕರಿಗೆ ಕನಿಷ್ಟ ಕೂಲಿಕೂಡಾ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಸಿಗುತ್ತಿಲ್ಲ. ಗ್ರಾಮೀಣ ಕಾರ್ಮಿಕರ ಕುರಿತಾದ ಸ್ಥಾಯಿ ಸಮಿತಿ ಕೃಷಿ ಕಾರ್ಮಿಕರ ಬಗ್ಗೆ ಒಂದು ಕೇಂದ್ರೀಯ ಕಾನೂನನ್ನು ರೂಪಿಸಬೇಕು ಎಂದು ಸರ್ವಾನುಮತದಿಂದ ಸಲಹೆ ನೀಡಿದ್ದರೂ, ಆ ಬಗ್ಗೆ ಒಂದು ಕರಡು ಕೂಡಾ ಸಿದ್ಧಗೊಂಡಿದ್ದರೂ ಕಾಂಗ್ರೆಸ್ (ಐ) ಸರಕಾರ ಅದನ್ನು ನಿರಾಕರಿಸುತ್ತಿದೆ.

ಏಳನೇ ಯೋಜನೆ ಭೂ ಸುಧಾರಣಾ ಕ್ರಮಗಳನ್ನು ಕೈಬಿಟ್ಟದೆ. ಇದುವರೆಗೆ ಕೈಗೊಂಡಿರುವ ಕ್ರಮಗಳ ಫಲಿತಾಂಶ ಕೂಡಾ ಹೇಗೆ ಹಾಸ್ಯಾಸ್ಪದವಾಗಿದೆ ಎಂಬುದನ್ನು ಸರಕಾರದ ಅಂಕಿ–ಅಂಶಗಳ ಮೂಲಕವೇ ಕಾಂ. ಸುರಜೀತ್ ಮನದಟ್ಟು ಮಾಡಿದರು. ಹಂಚಲು ಸಿಗಬಹುದಾದ ಮಿಗತಾಯ ಜಮೀನು ಸುಮಾರು 6.3 ಕೋಟಿ ಎಕ್ರೆ ಎಂದು ಮಹಾಲ್‌ನೋಬೀಸ್ ಸಮಿತಿ 1969ರಲ್ಲಿ ಅಂದಾಜು ಮಾಡಿದ್ದರೂ ಕಾಂಗ್ರೆಸ್ ಭೂ ಸುಧಾರಣೆಗಳ ಮೂಲಕ ಹಂಚಲು ದೊರಕಿದ್ದು ಕೇವಲ 43 ಲಕ್ಷ ಎಕ್ರೆಯಷ್ಟೆ. ಇದರಲ್ಲೂ ಸರಕಾರದ ಸ್ವಾಧೀನಕ್ಕೆ ಬಂದಿರುವುದು ಇದುವರೆಗೆ 29 ಲಕ್ಷ ಎಕ್ರೆ. ಅದರಲ್ಲಿ ನಿಜವಾಗಿ ಹಂಚಿರುವುದು ಕೇವಲ 20 ಲಕ್ಷ ಎಕ್ರೆ. 60 ಶೇಕಡಾ ಭೂಹೀನ ಗ್ರಾಮೀಣ ಜನತೆಗೆ ಕಾಗ್ರೆಸ್ (ಐ) ಆಳ್ವಿಕೆಯಲ್ಲಿ ಭೂಮಿ ಸಿಗುವ ನಿರೀಕ್ಷೆಯೂ ಈಗ ಇಲ್ಲವಾಗಿದೆ. ಅತ್ತ ಈ ಹಿಂದಿನ ಭೂ ಪ್ರದೇಶಗಳ ಕುಂದು ಕೊರತೆಗಳನ್ನು ನಿವಾರಿಸುವ ಉದ್ದೇಶ ಹೊಂದಿರುವ ಪಶ್ಚಿಮ ಬಂಗಾಳದ ಮಸೂದೆಗೆ ರಾಷ್ಟ್ರಪತಿಯವರ ಒಪ್ಪಿಗೆ ನೀಡಲು ಇನ್ನು ನಿರಾಕರಿಸುವ ಹಿನ್ನೆಲೆಯಲ್ಲಿ ಕಾಂಗ್ರೆಸ್ (ಐ) ನ ನಿಜವಾದ ಬಣ್ಣ ಏನೆಂಬುದು ಸ್ಪಷ್ಟ.

ಶೋಷಕ–ಪರ ನೀತಿ

ಹರಿಜನ, ಗಿರಿಜನರು ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಪಡೆಯಲು ಒತ್ತಾಯಿಸಿದಾಗಲೆಲ್ಲಾ ಭೂಮಾಲಿಕ ವರ್ಗ ಆಡಳಿತದ ಬೆಂಬಲದೊಂದಿಗೆ ಒಂದು ರೀತಿಯ ಯುದ್ಧವನ್ನೇ ನಡೆಸುತ್ತಾ ಬಂದಿದೆ. ಇಂತಹ ಹಲ್ಲೆಗಳಲ್ಲೂ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳದ್ದೇ ಸಿಂಹಪಾಲು ಎಂಬ ವಾಸ್ತವ ಸಂಗತಿಯತ್ತ ಕೂಡಾ ಕಾಂ. ಸುರಜೀತ್ ಸರಕಾರದ ಅಂಕೆ–ಸಂಖ್ಯೆಗಳ ಮೂಲಕವೇ ಮತದಾರರ ಗಮನ ಸೆಳೆದರು. ಅಕ್ಟೋಬರ್ 1, 1982 ರಿಂದ ಫೆಬ್ರವರಿ 83ರ ಅವಧಿಯಲ್ಲಿ ಪೊಲೀಸ್ ದಾಖಲೆಗಳಲ್ಲಿ ಬಂದ 3701 ಕೇಸುಗಳಲ್ಲಿ 3145 ಅಂದರೆ 80 ಶೇಕಡಾ ಕೇವಲ ಉತ್ತರಪ್ರದೇಶ ಮಧ್ಯಪ್ರದೇಶ, ಬಿಹಾರ ಹಾಗೂ ರಾಜಸ್ತಾನ ಈ ನಾಲ್ಕು ರಾಜ್ಯಗಳದ್ದೇ. ಈ ಅವಧಿಯಲ್ಲಿ ಎಡರಂಗ ಆಳ್ವಿಕೆಯ ಪಶ್ಚಿಮ ಬಂಗಾಲದಲ್ಲಿ ಈ ಸಂಖ್ಯೆ ಕೇವಲ ಆರು !

ದೇಶದ ಸದ್ಯದ ಆರ್ಥಿಕ ಪರಿಸ್ಥಿಯ ವಾಸ್ತವವಾಗಿ ಎಷ್ಟೊಂದು ಶೋಚನೀಯವಾಗಿದೆ ಎಂಬುದನ್ನು ಕಾಂ. ಸುರಜೀತ್ ಸಂಕ್ಷಿಪ್ತವಾಗಿಯಾದರೂ ಪರಿಣಾಮಕಾರಿಯಾಗಿ ವಿವರಿಸಿದರು. ಉತ್ತಮ ಫಸಲು ಬಂದರೂ ಜನತೆಗೆ ಅರೆಹೊಟ್ಟೆಯೇ. ಕೈಗಾರಿಕೆಗಳ ಸಾಮರ್ಥ್ಯದ ಪೂರ್ಣ ಉಪಯೋಗವಾಗುತ್ತಿಲ್ಲ. ಸೆಣಬು, ಬಟ್ಟೆ ಕೈಗಾರಿಕೆ ತೀವ್ರ ಬಿಕ್ಕಟ್ಟನಲ್ಲಿದೆ ಗೇರು, ನಾರು, ಕೈಮಗ್ಗ ಮುಂತಾದ ಸಾಂಪ್ರದಾಯಕ ಕೈಗಾರಿಕೆಗಳೂ ಗಂಭೀರ ಪರಿಸ್ಥಿತಿ ಎದುರಿಸುತ್ತಿವೆ. ಪರಿಣಾಮವಾಗಿ ಇವನ್ನು ಅವಲಂಬಿಸಿರುವ ಮಿಲಿಯಗಟ್ಟಲೆ ಕಾರ್ಮಿಕರು ಕಂಗಾಲಾಗಿದ್ದಾರೆ. ಆದರೆ ಅತ್ತ ಕೇವಲ ಹತ್ತೇ ವರ್ಷಗಳಲ್ಲಿ ಹತ್ತು ದೊಡ್ಡ ವ್ಯಾಪಾರಿ ಮನೆತನಗಳ ಆಸ್ತಿ "ನಾಲ್ಕು ಪಟ್ಟಾಗಿದೆ ! 1972 ರಲ್ಲಿ 2223.44 ಕೋಟಿಯಿದ್ದರು 1982 ರಲ್ಲಿ 8079.43 ಕೋಟಿ ರೂಪಾಯಿಗಳಾಗಿದೆ ! ಬಡ ಕಾರ್ಮಿಕರ ಕೂಲಿಯಲ್ಲಿ ಕಡಿತ ಮಾಡಿ ಅವರ ಜೀವನೋಪಾಯ ಕಸಿದುಕೊಂಡು ಗುತ್ತೇದಾರಿಗಳ ಖಜಾನೆ ತುಂಬಿಸುವ ಕಾಂಗ್ರೆಸ್ (ಐ) ಯೋಜನೆಗಳಿಂದ ಜನಸಾಮಾನ್ಯರು ಯಾವುದೇ ಪರಿಹಾರ ಹೇಗೆತಾನೇ ನಿರೀಕ್ಷಿಸಲು ಸಾಧ್ಯ ? ಆದ್ದರಿಂದ ಜನತೆ ಕಾಂಗ್ರೆಸ್ (ಐ) ಯನ್ನು ಈ ಚುನಾವಣೆಯಲ್ಲಿ ತಿರಸ್ಕರಿಸಲೇಬೇಕು ಎಂದು ಕಾಂ. ಸುರಜೀತ್ ಒತ್ತಿ ಹೇಳಿದರು.

ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಆಕ್ರಮಣ

ಆರ್ಥಿಕ ರಂಗದಲ್ಲಿ ಕಾಂಗ್ರೆಸ್ (ಐ) ನ ವೈಫಲ್ಯ ಈ ರೀತಿಯದಾಗಿದ್ದರೆ ರಾಜಕೀಯ ರಂಗದಲ್ಲಿ ಅದು ಪ್ರಜಾಪ್ರಭುತ್ವ ರೀತಿ -ನೀತಿಗಳಿಗೆ ಏಕ್‌ದಂ ವಿರುದ್ಧವಾಗಿ ವರ್ತಿಸುತ್ತಿರುವದರಿಂದ ಪ್ರಜಾಪ್ರಭುತ್ವದ ರಕ್ಷಣೆಯಾಗಬೇಕಾದರೆ ಅದು ಕಾಂಗ್ರೆಸ್ (ಐ) ಯನ್ನು ತಿರಸ್ಕರಿಸಿದರೆ ಮಾತ್ರ ಸಾಧ್ಯ ಎಂಬುದನ್ನು ಕಾಂ. ಸುರಜೀತ್ ಮತದಾರರ ಗಮನಕ್ಕೆ ತಂದರು. ಕಾಂಗ್ರೆಸ್ (ಐ) ನ ಧೋರಣೆಗಳಿಂದ ಅಸಂತುಷ್ಟರಾದ ಜನತೆ ಕರ್ನಾಟಕ ಹಾಗೂ ಆಂದ್ರ ಪ್ರದೇಶಗಳಲ್ಲಿ ಅದನ್ನು ತಿರಸ್ಕರಿಸಿದರು. ಆದರೂ ಅದರಿಂದ ಪಾಠ ಕಲಿಯದ ಕಾಂಗ್ರೆಸ್ (ಐ) ಜನತೆಯ ಆಂದೋಲನಗಳನ್ನು ರಾಕ್ಷಸಿ ರೀತಿಯಲ್ಲಿ ಹತ್ತಿಕ್ಕುತ್ತಿದೆ. ಎನ್. ಎಸ್. ಎ, ಎಸ್ಮಾ, ಭಯೋತ್ಪಾದಕ ಪೀಡಿತ ಕ್ಷೇತ್ರಗಳ (ವಿಶೇಷ ನ್ಯಾಯಾಲಯಗಳು) ಶಾಸನ ಇತ್ಯಾದಿಗಳ ಮೂಲಕ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನೆಲ್ಲಾ ಕಸಿದುಕೊಳ್ಳಲು ಯತ್ನಿಸಲಾಗುತ್ತಿದೆ.

ಈ ಸರ್ವಾಧಿಕಾರೀ ಪ್ರವೃತ್ತಿಯ ಫಲವಾಗಿ ಕೇಂದ್ರದಲ್ಲಿ ಹೆಚ್ಚೆಚ್ಚು ಅಧಿಕಾರಗಳು ರಾಶಿಗೊಳ್ಳುತ್ತಿವೆ. ವಿರೋಧ ಪಕ್ಷಗಳು ಹಾಗೂ ಅವುಗಳ ಸರಕಾರಗಳ ಬಗ್ಗೆ ಕಾಂಗ್ರೆಸ್ (ಐ) ಅಸಹನೆ ಹೆಚ್ಚುತ್ತಾ ಹೋಗುತ್ತಿದೆ. ಇತಕ್ಕೆ ಇತ್ತೀಚಿನ ಜಮ್ಮು–ಕಾಶ್ಮೀರ ಹಾಗೂ ಆಂಧ್ರದ ಘಟನೆಗಳು ಸಾಕ್ಷಿ. ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದ ಎಡರಂಗ ಸರಕಾರಗಳ ವಿರುದ್ಧ ಅದರ ದ್ವೇಷ ಹೆಚ್ಚುತ್ತಿದೆ. ಆದ್ದರಿಂದ ಕೇಂದ್ರ – ರಾಜ್ಯ ಸಂಬಂಧಗಳ ಪುನರ್ರಚನೆ ಈಗ ಮತದಾರರ ತೀವ್ರವಾಗಿ ಗಮನಿಸಬೇಕಾದ ಅತ್ಯಂತ ತುರ್ತಿನ ವಿಷಯ.

ಕಾಂಗ್ರೆಸ್ (ಐ) ಯನ್ನು ಏಕೆ ಅಧಿಕಾರದಿಂದ ಇಳಿಸಲೇಬೇಕು. ಎನ್ನುವುದಕ್ಕೆ ಇನ್ನೊಂದು ಪ್ರಬಲ ಕಾರಣ —ಭ್ರಷ್ಟಾಚಾರ, ಕ್ರಿಮಿನಲ್ ಚಟುವಟಿಕೆ ಹಾಗೂ ಸಮಾಜಘಾತಕ ಶಕ್ತಿಗಳಿಂದ ಕೂಡಿದ ಇಂತಹ ಒಂದು ಪಕ್ಷ ದೇಶವನ್ನು ಮುಂದಕ್ಕೊಯ್ಯಲಾರದು ಎಂದು ಕಾಂ. ಸುರಜಿತ್ ಸ್ಪಷ್ಟಗೊಳಿಸಿದರು. ಇದಕ್ಕೆ ಕಾಂಗ್ರೆಸ್ (ಐ) ನ ಮುಖಂಡರು, ಮಂತ್ರಿಗಳು ಆಗಾಗ ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿಕೊಳ್ಳುತ್ತಿರುವುದು, ಇತ್ತೀಚೆಗೆ ನಾಗಪುರದಲ್ಲಿ ಕಂಡುಬಂದಂತೆ ಯುವ ಕಾಂಗ್ರೆಸ್ (ಐ) ಹಾಗೂ ವಿದ್ಯಾರ್ಥಿಗಳ ಕ್ರಿಮಿನಲ್ ಚಟುವಟಿಕೆಗಳು ಸಾಕಷ್ಟು ಸಾಕ್ಷಿ ಒದಗಿಸಿವೆ.

ಜಾತ್ಯತೀತತೆಯನ್ನು ರಕ್ಷಿಸಲಾರದು

ಕಾಂಗ್ರೆಸ್ (ಐ) ನ ಈ ದಿವಾಳಿಕೋರ ನೀತಿಗಳಿಂದಾಗಿ ಉಂಟಾಗಿರುವ ಜನತೆಯ ಅತೃಪ್ತಿಯನ್ನು ತಪ್ಪುದಾರಿಗೆಳೆಯಲು ಪ್ರತಿಕ್ರಿಯವಾದೀ ಶಕ್ತಿಗಳು ಪ್ರಯತ್ನ ನಡೆಸುತ್ತಿವೆ. ಇದಕ್ಕೆ ಸಾಮ್ರಾಜ್ಯಶಾಹೀಯ ಸಂಪೂರ್ಣ ಬೆಂಬಲ ಸಿಗುತ್ತಿದೆ. ಹಿಂದೂ ಕೋಮುವಾದಿಗಳ, ಇಸ್ಲಾಮೀ ಮೂಲಭೂತವಾದಿಗಳ, ಸಿಖ್ ಉಗ್ರಗಾಮಿಗಳ, ಕ್ರಿಶ್ಚಿಯನ್ ಮಿಷನರಿಗಳ ಹಾಗೂ ಭಾಷಾ ಸಂಕುಚಿತವಾದಿಗಳ ಹೆಚ್ಚುತ್ತಿರುವ ವಿಚ್ಛಿದ್ರಕಾರೀ ಚಟುವಟಿಕೆಗಳು ಕಾಂಗ್ರೆಸ್ (ಐ) ಆಳ್ವಿಕೆಯ ಈ ಅವಧಿಯಲ್ಲಿ ಜನತೆಯ ಒಗ್ಗಟಿಗೆ ದೇಶದ ಸಮಗ್ರತೆಗೆ ಗಂಭೀರ ಅಪಾಯ ಉಂಟುಮಾಡಿವೆ. ಇವನ್ನೆಲ್ಲಾ ರಾಜಕೀಯವಾಗಿ ಎದುರಿಸುವ ಬದಲು ಕಾಂಗ್ರೆಸ್ (ಐ) ಈ ವಿಚ್ಛಿದ್ರಕಾರೀ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ತ್ರಿಪುರಾದಲ್ಲ, ಕೇರಳದಲ್ಲಿ ಇದು ಸ್ಪಷ್ಟವಾಗಿ ಕಾಣಬರುತ್ತಿದೆ.

ಪಂಜಾಬಿನ ಸಮಸ್ಯೆಯ ಬಗ್ಗೆ ಮಾತನಾಡುತ್ತಾ ಸಿ. ಪಿ- ಐ (ಎಂ) ಉಗ್ರಗಾಮಿಗಳನ್ನು ಪ್ರತ್ಯೇಖಿಸಿ ಸಾಮ್ರಾಜ್ಯ ಶಾಹಿಗಳ ಆಟವನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದ್ದು, ಇತರ ವಿರೋಧ ಪಕ್ಷಗಳೂ ಸಮಸ್ಯೆಯ ಪರಿಹಾರಕ್ಕೆ ನೆರವುನೀಡಲು ಪ್ರಯತ್ನಿಸುತ್ತಿದ್ದಾಗ ನಿಜವಾಗಿಒಂದು ಪರಿಹಾರ ಇನ್ನೇನು ಸಿಕ್ಕಿತು ಎಂದಿದ್ದಾಗ

ವೈಫಲ್ಯ ಮುಚ್ಚಿಕೊಳ್ಳಲು ಕಾಂಗ್ರೆನ ಸುಳ್ಳಿನ ಸರಮಾಲೆ

1980ರ ಚುನಾವಣೆಗಳಲ್ಲಿ ನೀಡಿದ ಯಾವುದೇ ಆಶ್ವಾಸನೆಯನ್ನು ಪೂರೈಸುವ ಬದಲು, ಜನ ಸಾಮಾನ್ಯರ ಮೇಲೆ ಕೇವಲ ಅಸಹನೀಯ ಹೊರೆಗಳನ್ನೇ ಹೇರಿದ ಕಳೆದ 5 ವರ್ಷಗಳ ತನ್ನ ವೈಫಲ್ಯವನ್ನು ಮರೆಮಾಡಲು ಕಾಂಗ್ರೆಸ್ (ಐ) ಪ್ರಚಾರ ಯಂತ್ರ ಜಾಹಿರಾತುಗಳ ಒಂದು ಸರಣಿಯನ್ನೇ ಪ್ರಕಟಿಸಿದೆ. ಪತ್ರಿಕೆಗಳ ಪೂರ್ಣ ಪುಟಗಳಲ್ಲಿ, ಗೋಡೆಗಳ ಮೇಲೆ ಮತದಾರರಿಗೆ ಸುಳ್ಳಿನ ಕಂತೆಯನ್ನು ಬಿಚ್ಚಿದ ಈ ಜಾಹಿರಾತುಗಳು ಯಾವ ವಾಸ್ತವತೆಯನ್ನು ಮರೆ ಮಾಚಲು ಪ್ರಯತ್ನಿಸಿವೆಯೆಂಬುದನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

"ಅಮೇರಿಕಾ ಮತ್ತು ಬ್ರಿಟನ್ನಿಗಿಂತ ಹೆಚ್ಚಿನ ಬೆಳವಣಿಗೆಯ ದರ ಹೊಂದಿದ ಒಂದು ದೇಶವನ್ನು ನೀವು ಹೆಸರಿಸಬಲ್ಲಿರಾ ?" ಎನ್ನುತ್ತದೆ ಒಂದು ಕಾಂಗ್ರೆಸ್(ಐ) ಜಾಹಿರಾತು. ಅತ್ಯಂತ ಮುಂದುವರಿದ ಕೈಗಾರಿಕೀಕೃತ ದೇಶಗಳಿಗಿಂತಲೂ ಭಾರತ ಬೆಳವಣಿಗೆಯ ವೇಗ ಹೆಚ್ಚು ಎಂದು ಹೇಳಬಯಸುತ್ತಿದೆ ಈ ಜಾಹಿರಾತು. ಜಾಗತಿಕ ಬ್ಯಾಂಕ್ ಪ್ರಕಟಿಸಿದ ಅಂಕಿ-ಅಂಶಗಳಲ್ಲಿ 34 ಅತ್ಯಂತ ಬಡದೇಶಗಳಲ್ಲಿ 11 ನೇ ದೇಶದ ಹೆಸರೇನು ಎಂದು ಅದೇ ಕಾಂಗ್ರೆಸ್[ಐ] ನವರನ್ನು ಕೇಳಿ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 1957 ರಲ್ಲಿ 53 ಲಕ್ಷವಿದ್ದ ಹೆಸರುಗಳು 1984ರ ಜೂನ್‌ನಲ್ಲಿ 2.?9 ಕೋಟಿಗೇರಿದ್ದು ಯಾವ ದೇಶದಲ್ಲಿ ? ಮೂರು ದಶಕಗಳ ಯೋಜನೆಯ ನಂತರವೂ ನಮ್ಮದು ಜಗತ್ತಿನ ಅತ್ಯಂತ ಬಡದೇಶಗಳಲ್ಲಿ ಒಂದು. ಮೂರು ದಶಕಗಳ ಹಿಂದೆ ನಮ್ಮ ಸ್ಥಿತಿಯಲ್ಲೇ ಅಥವಾ ನಮಗಿಂತಲೂ ಹೀನ ಸ್ಥಿತಿಯಲ್ಲಿದ್ದ ಏಷ್ಯನ್ ದೇಶಗಳಾದ ಉತ್ತರ ಕೊರಿಯಾ, ವಿಯೆಟ್ನಾಂ ಹಾಗೂ ಜನತಾ ಚೀಣಾ ವಿವಿಧ ಆರ್ಥಿಕ ಸೂಚ್ಯಂಕಗಳಲ್ಲೂ ಸಾಕ್ಷರತೆಯ ದರದಲ್ಲೂ ನಮಗಿಂತ ಎಷ್ಟೋ ಮುಂದೆ ಹೋಗಿವೆ.

ಇಂತಹುದೇ ಇನ್ನೊಂದು ಜಾಹೀರಾತಿನಲ್ಲಿ ಸ್ವಾವಲಂಬನೆಯ "ರುಚಿ"ಯ ಬಗ್ಗೆ ಹೇಳಲಾಗಿದೆ. ಐ.ಎಮ್.ಎಫ್. ಸಾಲಗಾರರಾದ ನಂತರಬಹುರಾಷ್ಟ್ರೀಯ ಕಂಪೆನಿಗಳಿಗೆ ಮುಕ್ತ ಸ್ವಾಗತ ನೀಡಿದ ನಂತರ "ಸ್ವಾವಲಂಬನೆಯ ರುಚಿ" ನಮಗೆ ನಿಜವಾಗಿಯೂ ತಿಳಿದಿದೆ. ಭೂಪಾಲ್ ದುರಂತದ ನಂತರ ಚೆನ್ನಾಗಿ ಅರ್ಥವೂ ಆಗಲಾರಂಭಿಸಿದೆ.

ಇನ್ನೊಂದು ಜಾಹೀರಾತು ಇತರ ಬೂರ್ಜ್ವಾ ಪಕ್ಷಗಳು ಕೇವಲ ಅಧಿಕಾರ ದಾಹವಿರುವ ಪಕ್ಷಗಳು ಎಂದು ಆಪಾದಿಸಿ ತನ್ನದು "ಸದಾ ಒಂದು ಸಿದ್ಧಾಂತ,ಸರ್ವ ಸಾಮಾನ್ಯವಾದಒಂದು ವೇದಿಕೆ ಹೊಂದಿದ್ದ ಪಕ್ಷ, ಮಾತ್ರವಲ್ಲ ಅದನ್ನು ಕಾರ್ಯರೂಪಕ್ಕಿಳಿಸಿದ ಪಕ್ಷ ಕೂಡಾ- ಕಾಂಗ್ರೆಸ್ ಸದಾ ಒಂದು ಐಕ್ಯ ಪಕ್ಷವಾಗಿತ್ತು." ಎಂದು ಹೇಳಿಕೊಂಡಿದೆ. ಇದನ್ನು ಓದಿದ ಯಾರಿಗಾದರೂ ಮೂರು ವರ್ಷಗಳಲ್ಲಿ ನಾಲ್ಕು ಮುಖ್ಯ ಮಂತ್ರಿಗಳನ್ನು ಬದಲಿಸಿ 1983 ರಲ್ಲಿ ಆಂಧ್ರ ಜನತೆಯ ಕೋಪದ ಬಿರುಗಾಳಿಯಲ್ಲಿ ತೂರಿ ಹೋದ ಒಂದು ಪಕ್ಷದ ನೆನಪಾಗುತ್ತದೆಯೇ ? ಕಳೆದ ವಿಧಾನ ಸಭಾ ಚುನಾವಣೆಯ ನಂತರ ಬಿಹಾರದಲ್ಲಿ ಎರಡನೇ ಮುಖ್ಯಮಂತ್ರಿಯನ್ನು ಕಾಣುತ್ತಿರುವ, ಉತ್ತರ ಪ್ರದೇಶದಲ್ಲಿ ಮೂರನೇ ಮುಖ್ಯ ಮಂತ್ರಿಯನ್ನು ಕಾಣುತ್ತಿರುವ, ಮಹಾ ರಾಷ್ಟ್ರದಲ್ಲಿ ನಾಲ್ಕನೇ ಮುಖ್ಯಮಂತ್ರಿಯ ಬಗ್ಗೆ ಆಗಲೇ ಸಾಕಷ್ಟುಯೋಚನೆ ನಡೆದಿರುವ ಒಂದು ಪಕ್ಷದ ಸರ್ವಸಾಮಾನ್ಯ ಸಿದ್ಧಾಂತ ಯಾವುದು ? ಮುಖ್ಯಮಂತ್ರಿಗಳು ಇನ್ನೂ ಬದಲಾಗದ ಗುಜರಾತ್, ಮಧ್ಯ ಪ್ರದೇಶ, ಒರಿಸ್ಸಾದಲ್ಲಿ ಪರಸ್ಪರ ಭ್ರಷ್ಟಾಚಾರ, ಅದಕ್ಷತೆಯ ಆಪಾದನೆಗಳ ಕೆಸರು ಚೆಲ್ಲಿಕೊಳ್ಳುತ್ತಿರುವ ಒಂದು ಪಕ್ಷದ ಆ ಸರ್ವ ಸಾಮಾನ್ಯ ವೇದಿಕೆ ಯಾವುದು ? ಅಧಿಕಾರ ದಾಹವೇ ಅಲ್ಲವೇ ?

ಜಾತೀಯತೆಯ ಬಗ್ಗೆ ವಿರೋಧ ವ್ಯಕ್ತಪಡಿಸುವ ಇನ್ನೊಂದು ಜಾಹೀರಾತಿನಲ್ಲಿ ತನಗೆ ಸಮಾನತೆಯಲ್ಲಿ ನಂಬಿಕೆಯಿದೆ ಮತ್ತು "ಕಡಿಮೆ ಅದೃಷ್ಟವಂತ ಜನತೆಗೆ ಹೆಚ್ಚೆಚ್ಚು ಬಾಗಿಲು ತೆರೆದಿದ್ದೇವೆ, ಅವಕಾಶಗಳನ್ನು ಒದಗಿಸಿದ್ದೇವೆ" ಎಂದು ಹೇಳಿಕೊಳ್ಳಲಾಗಿದೆ.

ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ನೀಡಿದ ಅಂಕಿ-ಸಂಖ್ಯೆಗಳನ್ನು ಗಮನಿಸಿ.82-83ರ 5ತಿಂಗಳ ಅವಧಿಯಲ್ಲಿ ದುರ್ಬಲ ಜನವಿಭಾಗಗಳ ಮೇಲೆ ಹಲ್ಲೆ ನಡೆದ 3701 ಕೇಸುಗಳು ದಾಖಲಾದವು. ಅವುಗಳಲ್ಲಿ ಬಿಹಾರದಲ್ಲಿ 494, ಮಧ್ಯಪ್ರದೇಶದಲ್ಲಿ 1112, ರಾಜಸ್ತಾನದಲ್ಲಿ 416, ಉತ್ತರ ಪ್ರದೇಶದಲ್ಲಿ1123. ಇವೆಲ್ಲಾಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳು. ಪಶ್ಚಿಮ ಬಂಗಾಲದಲ್ಲಿ ಹಾಗೂ ತ್ರಿಪುರಾದಲ್ಲಿ ಈ ಸಂಖ್ಯೆ ಅನುಕ್ರಮವಾಗಿ 6 ಮತ್ತು 1.

"ಇತಿಹಾಸದ ಕಸದ ತೊಟ್ಟಿಯಿಂದ ಕೋಮುವಾದೀ ಪಕ್ಷಗಳು ಎದ್ದು ಬಂದಿವೆ" ಎಂದು ಎದೆ ಬಡಿದುಕೊಳ್ಳುತ್ತಿದೆ ಈ ಜಾಹೀರಾತು. ಆ ಕಸದ ತೊಟ್ಟಿಗಳಲ್ಲಿ ಜೀವ ದ್ರವ್ಯ ಸೃಷ್ಟಿಸಿ ಆ ಪಕ್ಷಗಳ ಹುಟ್ಟಿಗೆ ಪೋಷಣೆ ನೀಡಿದವರು ಯಾರು ? ಕೇರಳದ "ಸಂಯುಕ್ತ ರಂಗ" ವನ್ನು ನೋಡಿ.

"ಚಾಕು-ಚೂರಿ ಸಂಸ್ಕೃತಿ"ಯ ಬಗ್ಗೆ ಉಪದೇಶ ನೀಡುವ ಹಾಗೂ "ಮುಳ್ಳು ಬೇಲಿ ಮನೆಯ ಬಾಗಿಲಿಗೆ ಬರುವ" ಎಚ್ಚರಿಕೆ ನೀಡುವ ಎರಡು ಜಾಹೀರಾತುಗಳು ಈ ಸರಣಿಯಲ್ಲಿ ಅತ್ಯಂತ ಅಸಹ್ಯವಾದವುಗಳು. "ಚಾಕು-ಚೂರಿ, ಆಸಿಡ್ ಬಲ್ಬ್‌ಗಳು ನಿಮ್ಮ ದಿನಸಿ ಪಟ್ಟಿಗೆ ಸೇರಬೇಕೇ" ಎಂದು ಕೇಳುವವರಿಗೆ "ಬೇಡ, ಆದ್ದರಿಂದಲೇ1977 ರಲ್ಲಿ ಪಶ್ಚಿಮ ಬಂಗಾಳ, ತ್ರಿಪುರಾಗಳಲ್ಲಿ 1983 ರಲ್ಲಿ ಕರ್ನಾಟಕದಲ್ಲಿ ನಿಮ್ಮನ್ನು ತಿರಸ್ಕರಿಸಿದ್ದು, ಈಗ ಕೇಂದ್ರದಿಂದಲೂ ಕೆಳಗಿಳಿಸಲು ಪ್ರಜಾಪ್ರಭುತ್ವವಾದೀ ಜನತೆಗೆ ಕರೆ ನೀಡುತ್ತಿರುವುದು " ಎಂದರೆ ಸಾಕಲ್ಲವೇ ?

ಅಸ್ಸಾಂ, ಪಂಜಾಬ್ ಸಮಸ್ಯೆಗಳತ್ತ ಬೆರಳು ತೋರುತ್ತಾ ದೇಶದ ಸಮಗ್ರತೆಯ ಬಗ್ಗೆ ಈಗ ಮೊಸಳೆ ಕಣ್ಣೀರು ಸುರಿಸುತ್ತಿರುವವರನ್ನು ಅಸ್ಸಾಂನಲ್ಲಿ ಆರಂಭದಲ್ಲಿ ಪ್ರತ್ಯೇಕತಾವಾದೀ ಚಳುವಳಿಯನ್ನು ನೀರೆರೆದು ಪೋಷಿಸಿ ಎಡ ಶಕ್ತಿಗಳನ್ನು ತನ್ಮೂಲಕ ಬಗ್ಗು ಬಡಿಯಲು ಪ್ರಯತ್ನಿಸಿದವರು ಯಾರು ? ಪಂಜಾಬಿನಲ್ಲಿ ಅಕಾಲಿ ದಳವನ್ನು ನಿರ್ಬಲಗೊಳಿಸಲು ಭಿಂದ್ರನ್ ವಾಲೇ ನೇತೃತ್ವದ ಉಗ್ರಗಾಮಿಗಳಿಗೆ ಪ್ರೋತ್ಸಾಹ ನೀಡಿದವರು ಯಾರು, ಇವೆರಡರ ದುಷ್ಫಲಗಳನ್ನು ಅನುಭವಿಸಿದ ನಂತರವೂ ತ್ರಿಪುರಾದಲ್ಲಿ ಪ್ರತ್ಯೇಕವಾದಿ ಉಗ್ರಗಾಮಿಗಳ ಜತೆ ಚೆನ್ನಾಟವಾಡುತ್ತಿರುವವರು ಯಾರು ಎಂದು ಕೇಳಬೇಕು.

"ಆನಂದ್‌ಪುರ್ ಸಾಹೀಬ್ ನಿರ್ಣಯ"ದ ಬಗ್ಗೆ ನೂತನ ಪ್ರಧಾನಿಗಳು ಒಂದೇ ಸಮನೆ ಉದುರಿಸುತ್ತಿರುವ ಅಮೂಲ್ಯ ಉದ್ಗಾರಗಳೂ ಇದೇ ಶ್ರೇಣಿಗೆ ಸೇರಬೇಕಾದ ಸುಳ್ಳು. ಖಲಿಸ್ತಾನವಾದಿಗಳ ಕ್ರಿಮಿನಲ್ ಚಟುವಟಿಕೆಗಳು ಶಿಖರಕ್ಕೇರಿದ್ದ ಸಂದರ್ಭದಲ್ಲೇ ಭಿಂದ್ರನ್‌ವಾಲೆಯನ್ನು "ದೇವತಾ ಪುರುಷ" ಎಂದ ವ್ಯಕ್ತಿ ಈಗ ಅದನ್ನು ಮರೆಮಾಚಲೇ ಬೇಕಾಗಿರುವಾಗ ಪ್ಲೇಟುಬದಲಿಸುವುದು ತುಂಬಾ ಕಷ್ಟದ ಕೆಲಸ.

○

ಕಾಂಗ್ರೆಸ್ (ಐ) ಸರಕಾರ ಉದಾಸೀನದ ಧೋರಣೆ ತಳೆಯಿತು. ಎಂದು ಕಾಂ. ಸುರಜೀತ್ "ದೀರ್ಘಕಾಲದಿಂದ ಭಿಂದ್ರನ್‌ವಾಲೆಯನ್ನು ಎತ್ತಿಕಟ್ಟಿದ್ದು, ಪ್ರಧಾನ ಮಂತ್ರಿಯ ಕೊಲೆಯ ನಂತರ ಅನೇಕ ಪ್ರಮುಖ ಕಾಂಗ್ರೆಸ್ಸಿಗರು ಭಾಗವಹಿಸಿದ್ದ ಸಿಖ್-ವಿರೋಧಿ ಗಲಭೆಗಳು ಸಿಖ್ ಕೋಮಿನಲ್ಲಿ ಪರಕೀಯ ಭಾವವನ್ನು ಪೂರ್ಣಗೊಳಿಸಿ ಉಗ್ರಗಾಮಿಗಳ ಕೈ ಮೇಲಾಗುವಂತಾಯಿತು" ಎಂದು ವಿಷಾದದಿಂದ ನುಡಿದರು. ಕೊಲೆಯ ನಂತರದ ಭಯಾನಕ ಗಲಭೆಗಳಲ್ಲಿ ಕಾಂಗ್ರೆಸ್‌ನ ಮೂರು ದಶಕಗಳ ಆಳ್ವಿಕೆಯಲ್ಲಿ ಜಾತ್ಯಾತೀತ ತತ್ತ್ವ ಎಷ್ಟೊಂದು ಕ್ಷೀಣಗೊಂಡಿದೆ ಎನ್ನುವುದು ಸ್ಪಷ್ಟಗೊಂಡಿದೆ. ಆದ್ದರಿಂದ "ಜಾತ್ಯಾತೀತೆಯನ್ನು ರಕ್ಷಿಸುತ್ತದೆಯೆಂದು ಕಾಂಗ್ರೆಸ್ (ಐ) ಮೇಲೆ ಭರವಸೆಯಿಡಲು ಸಾಧ್ಯವಿಲ್ಲ. ಅದು ನಿರ್ಗಮಿಸಲೇಬೇಕು"

ಅಷ್ಟೇ ಅಲ್ಲ, ಕೋಮು ಗಲಭೆಗಳು ಹೆಚ್ಚುತ್ತಿವೆ. ಮೊನ್ನೆಯ ದಸರಾ—ಮೊಹರಂ ದಿನಗಳಲ್ಲಿ 23ಕಡೆ ಕೋಮು ಗಲಭೆಗಳಾದವು. ಇವುಗಳಿಗೆ ಆಹುತಿಗಳಾಗುವುದು ಎರಡೂ ಕೋಮುಗಳ ಸಾಮಾನ್ಯ ಜನತೆ. ಅದೇ ರೀತಿ ಭಾಷಾ ಸಂಕುಚಿತವಾದವೂ ಒಂದು ಛಿದ್ರಕಾರೀ ಅಂಶವಾಗಿ ಬೆಳೆಯುತ್ತಿದೆ. ಅಲ್ಪಸಂಖ್ಯಾತರಿಗೆ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣದ ಅವಕಾಶವನ್ನು ನಿರಾಕರಿಸಿದರೆ ಅದಕ್ಕೆ ದೇಶದ ಐಕ್ಯತೆ ಬಲಿಯಾಗಬೇಕಾಗುತ್ತದೆ. ಇವೆಲ್ಲದರ ವಿರುದ್ಧ ಹೋರಾಡಿ ದೇಶದ ಐಕ್ಯತೆಯನ್ನು ರಕ್ಷಿಸುವುದು ಕೂಡಾ ಕಾಂಗ್ರೆಸ್ (ಐ) ಗೆ ಸಾಧ್ಯವಿಲ್ಲ. ಕಾಂಗ್ರೆಸ್(ಐ)ನ್ನು ಮುಂದಿನ ಚುನಾವಣೆಗಳಲ್ಲಿ ಏಕೆ ತಿರಸ್ಕರಿಸಬೇಕೆನ್ನುವುದಕ್ಕೆ ಇದು ಇನ್ನೊಂದು ಪ್ರಬಲ ಕಾರಣ.

ಕಾಂಗ್ರೆಸ್ (ಐ) ನ ಈ ವೈಫಲ್ಯದ ಹಿನ್ನೆಲೆಯಲ್ಲಿ ಸಿ. ಪಿ. ಐ. (ಎಂ) ಬಹಳ ದಿನಗಳಿಂದ ಸಾಮ್ರಾಜ್ಯ ಶಾಹಿ ಒಡ್ಡುತ್ತಿರುವ ಅಪಾಯದ ಬಗ್ಗೆ ಎಚ್ಚರಿಕೆ ನೀಡುತ್ತಿತ್ತು ಎನ್ನುವ ಅಂಶವನ್ನು ಕಾಂ. ಸುರಜೀತ್ ತಮ್ಮ ಭಾಷಣದಲ್ಲಿಭಾರತೀಯನಾಗರೀಕರಿಗೆ ನೆನಪು ಮಾಡಿಕೊಡುತ್ತಾ "ಶ್ರೀಮತಿ ಇಂದಿರಾಗಾಂಧಿಯವರ ಕೊಲೆ ಹಾಗೂ ನಂತರದ ಗಲಭೆಗಳು ದೇಶವನ್ನು ಛಿದ್ರಗೊಳಿಸುವ ಸಾಮ್ರಾಜ್ಯ ಶಾಹಿಗಳ ಸಂಚಿನ ಅಪಾಯವನ್ನು ಎತ್ತಿ ತೋರಿಸಿವೆ" ಎಂದರು. ನಮ್ಮ ದೇಶಕ್ಕೆ ಮಾತ್ರವಲ್ಲ ಸಮಸ್ತ ಮಾನವಕುಲಕ್ಕೇ ತೀವ್ರ ಅಪಾಯಕಾರಿಯಾದ ಸಾಮ್ರಾಜ್ಯಶಾಹಿಗಳ ವರ್ತನೆಯ ಬಗ್ಗೆಯೂ ಕಾಂ. ಸುರಜೀತ್ ಭಾರತೀಯ ನಾಗರಿಕರ ಗಮನ ಸೆಳೆದರು. ಸಮಾಜವಾದೀ ವ್ಯವಸ್ಥೆಯನ್ನು ನಾಶ ಮಾಡಲು ಸಾಮ್ರಾಜ್ಯ ಶಾಹಿಗಳು ಹೇಗೆ ನ್ಯೂಕ್ಲಿಯರ್ ಯುದ್ಧಕ್ಕೆ ತಯಾರಿ ನಡೆಸುತ್ತಿದ್ದಾರೆ, ಏಷ್ಯಾ, ಆಫ್ರಿಕಾ ಮತ್ತು ಲ್ಯಾಟೀನ್ ಅಮೆರಿಕಾದ ದೇಶಗಳಲ್ಲಿ ಹೇಗೆ ಮಧ್ಯ ಪ್ರವೇಶಿಸುತ್ತಿದ್ದಾರೆ, ತಮಿಳು ಅಲ್ಪಸಂಖ್ಯಾತರ ಸಮಸ್ಯೆಯ ದುರ್ಲಾಭ ಪಡೆದು ಹೇಗೆ ಭಾರತ, ಶ್ರೀಲಂಕಾಗಳ ಜನತೆಗಳ ನಡುವಿನ ಸಂಬಂಧಗಳನ್ನು ಕೆಡಿಸಲು ಪ್ರಯತ್ನಿಸುತ್ತಿದ್ದಾರೆ ಎನ್ನುವುದನ್ನೂ ಭಾರತೀಯ ನಾಗರೀಕರು ತಿಳಿಯಬೇಕಾಗಿದೆ.

ಈ ಸಂದರ್ಭದಲ್ಲೇ ಕಾಂ. ಸುರಜೀತ್ ವಿದೇಶಿ ಧೋರಣೆಗಳ ಕುರಿತಂತೆ ಸಿ. ಪಿ. ಐ. (ಎಂ) ನ ನಿಲುವನ್ನು ಸಂಕ್ಷಿಪ್ತವಾಗಿ ಮಂಡಿಸಿದರು- "ನೆರೆಯ ದೇಶಗಳಲ್ಲಿ ಪ್ರಜಾಪ್ರಭುತ್ವದ ಪುನರ್ ಸ್ಥಾಪನೆಗಾಗಿ ನಡೆಯುತ್ತಿರುವ ಆಂದೋಲನಗಳಿಗೆ ಸಿ. ಪಿ. ಐ (ಐ) ಬೆಂಬಲ ನೀಡುತ್ತದೆ. ಭಾರತ- ಚೀಣಾಗಳ ನಡುವಿನ ವಿವಾದಗಳಿಗೆ ಒಂದು ಶಾಂತಿಯುತ ಪರಿಹಾರ ಕಂಡುಕೊಂಡು ಎರಡೂ ದೇಶಗಳ ನಡುವಿನ ಸಂಬಧಗಳನ್ನು ಸುಧಾರಿಸಬೇಕು. ಸೋವಿಯೆತ್ ಸಂಘ ಹಾಗೂ ಸಮಾಜವಾದೀ ದೇಶಗಳ ಜತೆಗಿರುವ ಮಿತ್ರತ್ವಪೂರ್ಣ ಸಂಬಂಧಗಳನ್ನು ಇನ್ನಷ್ಟು ಬಲಗೊಳಿಸಬೇಕು ಎಂದು ಸಿ. ಪಿ. ಐ (ಎಂ) ಬಯಸುತ್ತದೆ. ಯಾಕೆಂದರೆ ನಮ್ಮ ಸ್ವಾಧೀನತೆಯನ್ನು ಮತ್ತು ರಕ್ಷಣಾ ಸಾಮರ್ಥ್ಯವನ್ನು ಬಲಗೊಳಿಸುವ ಸಂಬಂಧಗಳವು."

ಎಡ ಶಕ್ತಿಗಳ ಮಹತ್ತ್ವ

ಕಾಂಗ್ರೆಸ್ (ಐ) ಬಗ್ಗೆ ಒಟ್ಟಿನಲ್ಲಿ ಪಕ್ಷದ ಸ್ಪಷ್ಟ ಅಭಿಪ್ರಾಯ ಮಂಡಿಸುತ್ತಾ "ಪ್ರಜಾಪ್ರಭುತ್ವ ತತ್ವಗಳ ಪ್ರಕಾರ ನಡೆಯುವುದರಲ್ಲಾಗಲೀ, ಜಾತ್ಯತೀತ ತತ್ತ್ವವನ್ನು ರಕ್ಷಿಸುವುದರಲ್ಲಾಗಲೀ, ದೇಶದ ಐಕ್ಯತೆಯನ್ನು ಕಾಪಾಡುವಲ್ಲಿಯೇ ಆಗಲಿ ಕಾಂಗ್ರೆಸ್ (ಐ) ಅಸಮರ್ಥವಾಗಿದೆ. ಅದನ್ನು ಮತ್ತೆ ಅಧಿಕಾರಕ್ಕೆ ತಂದರೆ ಅದೊಂದು ಅನಾಹುತವಾಗುತ್ತದೆ" ಎಂದು ಕಾಂ. ಸುರಜಿತ್ ದೇಶದ ಮತದಾರರನ್ನು ಎಚ್ಚರಿಸಿದರು. ಅದರ ಸ್ಥಾನದಲ್ಲಿ ಎಡಶಕ್ತಿಗಳ ಮಿತ್ರತ್ವ ಹೊಂದಿರುವ ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳ ಕೂಟವೊಂದನ್ನು ಅಧಿಕಾರಕ್ಕೆ ತರಲು ಅವರು ಮತದಾರರಿಗೆ ಕರೆ ನೀಡಿದರು.

ಸಿ. ಪಿ. ಐ. (ಎಂ) ಹಾಗೂ ಇತರ ಶಕ್ತಿಗಳನ್ನು ಈ ಚುನಾವಣೆಗಳು ಬಲಪಡಿಸುವುದರ ಅಗತ್ಯದ ಬಗ್ಗೆ ತಮ್ಮ ಭಾಷಣದ ಅಂತ್ಯದಲ್ಲಿ ಕಾಂ. ಸುರಜಿತ್ ಒತ್ತಿ ಹೇಳಿದರು. ಅದಕ್ಕೆ ಕಾರಣಗಳನ್ನು ಅವರು ವಿವರಿಸಿದರು. ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದ ಎಡರಂಗ ಸರಕಾರಗಳು ಹಾಗೂ 22 ತಿಂಗಳ ಕಾಲ ಆಳ್ವಿಕೆ ನಡೆಸಿದ ಕೇರಳದ ಎಡ ಪ್ರಜಾಪ್ರಭುತ್ವವಾದೀ ಸರಕಾರ ಜನತೆಯನ್ನು,ಅವರ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವಲ್ಲಿ, ಕೋಮುಗಳ ನಡುವೆ ಸೌಹಾರ್ದ ಕಾಪಾಡುವಲ್ಲಿ

[7ನೇ ಪುಟ ನೋಡಿ]

[3ನೇ ಪುಟದಿಂದ]

ಕೋಷ್ಟಕ 1: ಅಭಿವೃದ್ಧಿ ದರದಲ್ಲಿ ಇಳಿಮುಖ

ವರ್ಷ	ಒಟ್ಟು ರಾಷ್ಟ್ರೀಯ ಉತ್ಪನ್ನ ಅಭಿವೃದ್ಧಿ ದರ	ಕೃಷಿ	ಕೈಗಾರಿಕೆ	ಸೇವಾ ಸೌಲಭ್ಯಗಳು
1960–70	3.4	1.9	5.4	4.6
1970–80	3.6	1.9	4.4	5.2

ಕೋಷ್ಟಕ 2: ಉತ್ಪಾದನೆಯ ಸೂಚ್ಯಂಕಗಳು

ವರ್ಷ	ಆಹಾರ ಧಾನ್ಯಗಳು 1959–62 = 100	ಕೃಷಿ 1959–62 =100	ಕೈಗಾರಿಕೆ 1960=100
1950–51	67.4	68.9	54.8
1960–61	102.1	102.7	112.7
1970–71	133.9	131.4	233.8
1982–83	159.7	161.4	391.4

ಕೋಷ್ಟಕ 3: ಪ್ರತಿ ಒಬ್ಬ ಪ್ರಜೆಗೆ ದೊರೆಯುವ ಕೆಲವು ಜೀವನಾವಶ್ಯಕ ವಸ್ತುಗಳ ಸರಾಸರಿ

ವರ್ಷ	ಆಹಾರ ಧಾನ್ಯಗಳು ಗ್ರಾಂ	ಬೇಳೆಕಾಳುಗಳು ಗ್ರಾಂ	ಒಟ್ಟು ಗ್ರಾಂ (ದಿನಕ್ಕೆ)	ಹತ್ತಿಬಟ್ಟೆ ಮೀಟರ್	ಎಲ್ಲಾ ವಿಧದಬಟ್ಟೆ ಮೀಟರ್(ವರ್ಷಕ್ಕೆ)
1956	360.5	70.4	430.9	14.4	
1961	399.7	69.0	468.7	14.8	16.0
1971	417.6	51.2	468.8	12.4	14.6
1981	416.1	37.3	453.4	10.6	14.9
1982	414.8	39.1	453.9	9.8	13.5
1983	392.0	38.4	430.4	....	....

ಕೋಷ್ಟಕ 4: 1980ರಲ್ಲಿ ದೊರೆಯುವ ದೈನಿಕ ಸರಾಸರಿ ಆಹಾರ (ಕ್ಯಾಲೋರಿಗಳಲ್ಲಿ)

ದೇಶ/ಪ್ರದೇಶ	ಒಟ್ಟು ಕ್ಯಾಲೋರಿ	ಕನಿಷ್ಠ ಅಗತ್ಯದ ಶೇಕಡಾಂಶ
ಭಾರತ	1880	87
ಚೀನಾ	2539	107
ಶ್ರೀಲಂಕಾ	2238	102
ಕಡಿಮೆ ಆದಾಯದ ಎಲ್ಲಾ ದೇಶಗಳು	2218	97
ಮಧ್ಯಮ ಆದಾಯದ ದೇಶಗಳು	2579	110
ಅಭಿವೃದ್ಧಿ ಹೊಂದಿದ ಬಂಡವಾಳ ಶಾಹಿ ದೇಶಗಳು	3433	134
ಪೂರ್ವ ಯೂರೋಪಿನ ಸಮಾಜವಾದಿ ದೇಶಗಳು	3412	133

ಕೋಷ್ಟಕ 5: ವಯಸ್ಕರ ಸಾಕ್ಷರತೆಯ ಶೇಕಡಾ ದರ

ದೇಶ/ಪ್ರದೇಶ	1960	1980
ಭಾರತ	28	36
ಚೀನಾ	43	69
ವಿಯಟ್ನಾಂ	....	87
ಕಡಿಮೆ ಆದಾಯದ ಎಲ್ಲಾ ದೇಶಗಳು	34	52
ಮಧ್ಯಮ ಆದಾಯದ ಎಲ್ಲಾ ದೇಶಗಳು	48	65
ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು	96	99
ಪೂರ್ವ ಯೂರೋಪಿನ ಸಮಾಜವಾದಿ ದೇಶಗಳು	97	99

ಕೋಷ್ಟಕ 6: ಪ್ರತಿಒಬ್ಬ ವೈದ್ಯನಿಗೆ ಜನಸಂಖ್ಯೆ

ದೇಶ/ಪ್ರದೇಶ	1960	1980
ಭಾರತ	4850	3640
ಚೀನಾ	8330	1920
ಅಭಿವೃದ್ಧಿ ಹೊಂದಿದ ದೇಶಗಳು	816	554
ಯುರೋಪಿನ ಸಮಾಜವಾದಿ ದೇಶಗಳು	683	356

ಎ. ಕೆ. ಜಿ. ಭವನದ ನಿಧಿಗೆ ಸಹಾಯ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಎ. ಸಣ್ಣ ಬಸವ 5, ಬಿ. ಶೀನ 5, ಕೃಷ್ಣ ಕಾರ್ವಿ 5, ಎಂ. ಭದ್ರ 5, ಎ, ದೇವಪ್ಪ 5, ಎ. ಬಾಬು 5, ಎ. ದೊಡ್ಡ ಬಸವ 5, ಎ. ಶೀನ 5, ಕೆ. ಅನಂತ 5, ವಿ. ನಾಗ 5, ಎ. ಬಾಲ 5, ದೊಡ್ಡ ನಾರಾಯಣ 5, ಸಣ್ಣ ನಾರಾಯಣ 5, ಹೆಚ್. ನರಸಿಂಹ 5, ಕೆ. ನಾರಾಯಣ 5,ಹೆಚ್. ಬಸವ 5, ಎಂ. ಶೀನ 5, ಎನ್. ಕೆ. ನರಸಿಂಹ 5, ಕೆ. ಜುಜೆ ಕರ್ನೆಲೋ 5, ಇಜ್ಜೆ ನಾಯಕ್ 5, ಕೆ. ಎಂ. ಕುಷ್ಟ 5, ಕೆ. ಎಂ. ವೆಂಕಟ 5, ಎಂ. ಸಂಜೀವ 5, ಎಂ. ಲಕ್ಷ್ಮಣ 5, ಎಂ. ರಫೆಟಿ ನಾಯಕ್ 5, ಎಂ. ಗೋವಿಂದ 10, ಕೆ. ಸುಬ್ಬಯ್ಯ 5, ಹೆಚ್. ಭದ್ರ 5, ಭಾತ್ರಬೆಟ್ಟು ರಾಮ 5, ಕೆ.5 ಆನಂದ ವಿ. ಶಂಕರ 5, ವಿ, ಶೀನ 5, ಟಿ. ಕುಷ್ಮ 5, ರಾಜು 5, ಎಂ. ಮುತ್ತ 5, ವಿ. ಸೋಮ5, ವಿ. ಅಣ್ಣಯ್ಯ 5, ವಿ. ನಾಗೇಶ 5, ಕೆ. ಮಾಸ್ತಿ 5, ಹೆಚ್. ಪುಟ್ಟ 5, ವಿ. ಶುಕ್ರ 5, ಹೆರಿಯ 5, ರಘು 5, ಕ್ಯಾಪಾಡಿ ನಾರಾಯಣ 5, ಕೋಣಿ ರಾಮ 5, ಕೆ. ನಾರಾಯಣ 5, ಗೋಪಾಲ 5, ಎ. ಶೀನ 5, ವಿ. ರಾಮ 5, ಜಗನ್ನಾಥ 5, ಸಂಜೀವ 5, ಶುಕ್ರ ದೇವಾಡಿಗ 5, ಮಂಜು ಕುಲಾಲ 5, ಹೆಚ್. ನರಸಿಂಹ 5, ಬಿ. ರಾಮ 5, ಪುಟ್ಟಯ್ಯ 5, ಬಸವ ಕುಲಾಲ 5, ಮಂಜ 5, ಬೆಟ್ಟಗರ ಬಸವ 5, ಲಕ್ಷ್ಮಣ 5, ರೋಖಿ 5, ಟಿ. ನರಸಿಂಹ 5, ವಿ.ನರಸಿಂಹ 10, ಹೆಚ್. ಶೀನ 5. ಕೆ.ರಾಮ5 ಕೆ. ರಾಜೀವ 5. ಕೆ. ಪದ್ಮ 5, ಕೆ. ಶಿವ 5, ಎಸ್. ನಾರಾಯಣ 5, ಎಸ್. ಶೀನ 5, ಥಾಮಸ್ 5, ಕೆ. ದಾರ 5, ಬೆಟ್ಟಗರ ಬಾಬು 5, ರಾಜು ಕಲ್ಲಗಾರ 5, ವಿ. ಬಾಬು 5. ವಿ. ಪುಟ್ಟಯ್ಯ 5, ವಿ- ಕೊರಗ 5, ಕೃಷ್ಣ ಶೆಟ್ಟಿ [ಡ್ರೈವರ್] ಅಂಗಳ್ಳಿ 20, ಎಸ್. ಶೀನ 5, ಶಕುಂತಲ 5, ಯಮುನ 5, ರಾಧ 5, ರತ್ನ 5, ಹರಿಣಾಕ್ಷಿ 5, ಗಿರಿಜಾ 5,

ಉಡುಪಿ ತಾಲ್ಲೂಕ್

ಡೇವಿಡ್ ಎ. ಕರ್ಕಡ 25, ಹೆಚ್. ವಿಠಲ 10, ಶಂಕರ ಶೆಟ್ಟಿಗಾರ್ 5, ಫ್ರೆಡೆರಿಕ್ ಆಲ್ಬರ್ಟ್-ಸೋನ್ಸ್ 10,ಕೆ. ಸಂಜೀವ ಶೆಟ್ಟಿಗಾರ 10, ಸುಂದರ ಪೂಜಾರಿ 5, ರಾಜು 5, ಗಂಗಾಧರ್ ಕೆ. ಅಮಿನ್ 5, ರಾಮ ಕೆ. ಕುಂದರ್ 10, ರಘುನಾಥ 10, ಕಲು ಮೊಯ್ಲಿ 10, ಜೆ. ನಾರಾಯಣ ಸುವರ್ಣ 5, ಪೂವಪ್ಪ ಕೊಟ್ಯನ್ 5. ಪ್ರೇಮ 5, ಸುಂದರ ಸುವರ್ಣ 5, ಸಾಧು ಪೂಜಾರಿ 5, ನಾರಾಯಣ ಶೆಟ್ಟಿಗರ 5, ಎಂ. ರಾಬರ್ಟ್ ಡಿ"ಸೋಜ 5, ಜೆನಿ ಡಿ"ಸೋಜ 5, ತಿಮೆತಿ ಡಿ"ಸೋಜ 5, ಶೀನ ಕುಲಾಲ 5, ಕಡಿಯ ನಾಯಕ್ 5, ನಾರಾಯಣ ನಾಯಕ್ 5, ಅಲೆಕ್ಸ ಡಿ"ಸೋಜ 5, ಮಾತಿಸ್ ಡಿ"ಸೋಜ 5, ದೇವು ಪೂಜಾರಿ 5,

ಮುಂದುವರಿಯುವುದು

ಚುನಾವಣಾ ಪ್ರಚಾರ ಸಭೆ

ಧಾರವಾಡದಲ್ಲಿ ತಾ 15 ರಂದು ಚುನಾವಣೆ ಪ್ರಚಾರ ಕಾರ್ಯಕ್ರಮದ ಅಂಗವಾಗಿ ಬಹಿರಂಗ ಸಭೆ ನಡೆಸಲಾಯಿತು. ಇದಕ್ಕೆ ಮೊದಲು ಕಾರ್ಮಿಕರ ವಸತಿ ರಹಿತರ ಹಾಗೂ ಪಕ್ಷದ ಹಿತೈಷಿಗಳ ಬೃಹತ್ ಮೆರವಣಿಗೆ ನಡೆಸಲಾಯ್ತು. ಕೆ. ಸಿ. ಸಿ. ಬ್ಯಾಂಕ್ ವೃತ್ತದಲ್ಲಿ ಹಾಕಲಾದ ವೇದಿಕೆಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಕಾಂ. ವಿ.ಜೆ.ಕೆ. ನಾಯರ್, ಕಾಂ. ವಿ.ಎನ್. ಹಳ ಕಟ್ಟಿ ಮಾತನಾಡಿದರು. ಸರ್ವಾಧಿಕಾರಿ ಕಾಂಗ್ರೆಯನ್ನು ಏಕೆ ಸೋಲಿಸಬೇಕು ಜಾತಿವಾದಿ ಬಿ. ಜೆ. ಪಿ.ಯನ್ನು ಏಕೆ ಸೋಲಿಸಬೇಕೆಂದು ಜನತೆಗೆ ವಿವರಿಸಿ ಪ್ರಜಾಪ್ರಭುತ್ವ ರಕ್ಷಣೆಗಾಗಿ ಜನತಾ ಪಕ್ಷಕ್ಕೆ ಮತ ಕೊಡಲು ಜನತೆಗೆ ಮನವಿ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಬಿ. ಕಟ್ಟಿ ವಹಿಸಿದರು. ಕಾಂ. ಆರ್.ವಿ. ಪಾಟೀಲ ಸ್ವಾಗತಿಸಿದರು. ಕಾ.ವಿ. ಜಿ. ಕಮ್ಮಾರ್ ವಂದಿಸಿದರು. SFI, DYFI ಸಂಗಾತಿಗಳು ಕ್ರಾಂತಿ ಗೀತೆಗಳನ್ನು ಹಾಡಿದರು.

ಅಂಚೆ ಇಲಾಖೆಯ ನೌಕರರಸಮ್ಮೇಳನ

ತಾ 9–12–84 ರಂದು ಮೈಸೂರಿನ ಅಂಚೆ ಇಲಾಖೆಯ ಗ್ರೂಪ್ ಡಿ ನೌಕರ ವರ್ಗದ ಸಮ್ಮೇಳನ ನಡೆಯಿತು. ಇದಕ್ಕೆ ಜಿಲ್ಲಾ ಸಿ. ಐ. ಟಿ. ಯು. ತನ್ನ ಶುಭಾಶಯವನ್ನು ಕೋರಿತು. ನಂತರ ಸಭೆಯನ್ನು ಉದ್ದೇಶಿಸಿ ಕರ್ನಾಟಕ ವಲಯ ಅಧ್ಯಕ್ಷರಾದ ಕಾಂ. ಜಯರಾಂ ಮತ್ತು ಇತರೆ ಕಾರ್ಮಿಕ ನಾಯಕರುಗಳು ಮಾತನಾಡಿದರು. ಮುಂದಿನ ಕಾರ್ಯಕಾರಿ ಸಮಿತಿಗೆ ಕಾಂ ಮುಂಟಯ್ಯ, ಕಾಂ.ಆರ್. ಶ್ರಿನಿವಾಸ್ ಅವರುಗಳನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಯಿತು.

ಕಲ್ಕತ್ತ ಸಮಾವೇಶದ ಆರ್ಥಿಕ ಕಾರ್ಯಕ್ರಮ

(2ನೇ ಪುಟದಿಂದ)
ದೇಶದ ರಾಜಕೀಯವನ್ನು ಕಲಕಿ, ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಅಪಾಯ ಉಂಟುಮಾಡುತ್ತಿವೆ. ಕೇಂದ್ರ ಸರಕಾರದ ನೀತಿಯ ವಿರುದ್ಧ ನಡೆಯುವ ಯಾವುದೇ ಚಟುವಟಿಕೆಗಳನ್ನು ಆಳುವ ಪಕ್ಷ "ಪ್ರಾದೇಶಿಕವಾದ" "ರಾಷ್ಟ್ರಕ್ಕೆ ವಿರೋಧಿ" ಎಂದೆಲ್ಲ ಹೇಳಿ ಅವುಗಳನ್ನು ಖಂಡಿಸುತ್ತಿದೆ. ಅದೇ ಸಮಯದಲ್ಲಿ ತನ್ನ ಸಂಕುಚಿತ ಲಾಭಕ್ಕಾಗಿ ಛಿದ್ರಕಾರಿ ಶಕ್ತಿಗಳನ್ನು ಸಂದರ್ಭ ಸಾಧನವನ್ನಾಗಿ ಉಪಯೋಗಿಸುತ್ತಿದೆ.

ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಎಲ್ಲ ಪಕ್ಷಗಳೂ ಇಂಥ ಅಪಾಯಕಾರಿ ವಿಚಾರ ಧಾರೆಯ ವಿರುದ್ಧ ದಿಟ್ಟತನದಿಂದ ಹೋರಾಡುವ ಪ್ರತಿಜ್ಞೆ ಮಾಡುತ್ತದೆ. ಅದೇ ಸಮಯದಲ್ಲಿ ದೇಶದ ಮತ್ತು ಜನತೆಯ ಹಿತಗಳನ್ನು ರಕ್ಷಿಸುತ್ತದೆ.

ಸಮ್ಮೇಳನದ ಬೇಡಿಕೆಗಳು

1. ಠೋಕ ವ್ಯಾಪಾರಿಗಳ ಲಾಭದಲ್ಲಿ ಕಡಿತಮಾಡಿ, ಗ್ರಾಹಕರಿಗೆ ಅತ್ಯಾವಶ್ಯಕ ವಸ್ತುಗಳನ್ನು ನ್ಯಾಯ ಬೆಲೆಯಲ್ಲಿ ಒದಗಿಸಲು ಕೇಂದ್ರ ಸರಕಾರ ನಿಶ್ಚಿತ ಕ್ರಮ ಕೈಗೊಳ್ಳಬೇಕು. ಅದರ ಸಲುವಾಗಿ ಸರಿಯಾದ ವಿತರಣಾ ವ್ಯವಸ್ಥೆ ಸಂಘಟಿಸಬೇಕು. ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಬೇಕಾಗುವ ದಿನನಿತ್ಯದ ಬಳಕೆಯ ವಸ್ತುಗಳನ್ನು ಹೆಚ್ಚು ಉತ್ಪಾದನೆ ಮಾಡಲಿಕ್ಕೆ ಪ್ರಾಶಸ್ತ್ಯ ಕೊಡಬೇಕು. ಆಹಾರಧಾನ್ಯ, ಬೆಳೆಕಾಳು, ಎಣ್ಣೆ, ಉಪ್ಪು, ಸಕ್ಕರೆ, ಕಲ್ಲಿದ್ದಲು, ಚಿಮಿಣಿ ಎಣ್ಣೆ, ಸಾದಾ ಬಟ್ಟೆ, ಪೇಪರ್, ಜೀವ ಉಳಿಸುವ ಔಷಧಗಳು, ಬೆಂಕಿಪೊಟ್ಟಣ ಮುಂತಾದವುಗಳನ್ನು ಸರಕಾರದ ಧನ ಸಹಾಯದಿಂದ ಅಗ್ಗದರದಲ್ಲಿ ಒದಗಿಸಬೇಕು. ಅಂಥ ವಸ್ತುಗಳ ಮೇಲಿನ ಎಕ್ಸೈಸ್ ಡ್ಯೂಟಿಯನ್ನು ತೀವ್ರವಾಗಿ ಕಡಿತ ಮಾಡಬೇಕು. ಅವುಗಳ ರವಾನೆಗೆ ಪ್ರಾಶಸ್ತ್ಯ ನೀಡಬೇಕು.

2 ಸರಕಾರವೇ ತಮ್ಮ ಏಜಂಟರ ಮೂಲಕ ಸಾಕಷ್ಟು ಖರೀದಿ ಮಾಡುವ ಮೂಲಕ ಒಕ್ಕಲತನದ ಹುಟ್ಟುವಳಿಗೆ ಲಾಭದಾಯಕ ಬೆಲೆಯು ಸಿಗುವಂತೆ ಆಶ್ವಾಸನೆ ನೀಡಬೇಕು.

3 ಚಿಕ್ಕಪುಟ್ಟ ಕಸಬುದಾರರನ್ನೊಳಗೊಂಡು ಎಲ್ಲರಿಗೂ ಉದ್ಯೋಗ ಹೆಚ್ಚಾಗುವ ರೀತಿಯಲ್ಲಿ ಸಾರ್ವಜನಿಕರಿಗೆ ಬೇಕಾಗುವಂಥ ವಸ್ತುಗಳು ಜಾಸ್ತಿಯಾಗಿ ಉತ್ಪಾದನೆಯಾಗುವಂತೆ ಆರ್ಥಿಕ ಧೋರಣೆಯನ್ನು ಸಂಪೂರ್ಣ ಬದಲಾಯಿಸಬೇಕು.

4 ಕೆಲಸಕ್ಕಾಗಿ ಆಹಾರ ಯೋಜನೆಯನ್ನು ಪುನರಾರಂಭಿಸಿ, ಅದನ್ನು ವಿಸ್ತರಿಸಬೇಕು.

8 ಈಗಿರುವ ಭೂ ಸುಧಾರಣಾ ಮಸೂದೆಗಳಲ್ಲಿರುವ ಕುಂದು ಕೊರತೆಗಳನ್ನು ತೆಗೆದುಹಾಕಿ, ಕಾನೂನು ಶೀಘ್ರವಾಗಿ ಜ್ಯಾರಿಗೆ ತಳಿಸಬೇಕು.

ರಾಜ್ಯ ಶಾಸನ ಸಭೆಗಳಲ್ಲಿ ಮಂಜೂರಾತಿ ಪಡೆದ ಮಸೂದೆಗಳಿಗೆ ಕೂಡಲೇ ಒಪ್ಪಿಗೆ ನೀಡಬೇಕು.

6 ನಮ್ಮ ಸಂವಿಧಾನದಲ್ಲಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸೇರಿಸಬೇಕು.

7 ರೈತರಿಗೆ ಕಡಿಮೆ ಬಡ್ಡಿಯಿಂದ ಸಾಲ ಸಿಗುವಂತೆ ಮಾಡಬೇಕು; ಗೊಬ್ಬರ ಮತ್ತಿತರ ರೈತರಿಗೆ ಬೇಕಾದ ವಸ್ತುಗಳನ್ನು ಒದಗಿಸಬೇಕು.

8 ಕೃಷಿ ಕಾರ್ಮಿಕರಿಗೆ ಕನಿಷ್ಟ ವೇತನ ಕೊಡಬೇಕು, ಗ್ರಾಮಾಂತರ ಪ್ರದೇಶದ ಜನರ ಜೀವನ ಮಟ್ಟ ಮತ್ತು ದುಡಿತ ಸುಧಾರಿಸಲು ಕ್ರಮ ಕೈಗೊಳ್ಳಬೇಕು.

9 ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಕೈಬಿಡಬೇಕು. ಎನ್.ಎಸ್.ಎ.,ಎಸ್ಮಾಗಳಂಥ ರಾಕ್ಷಸೀ ಕಾಯಿದೆಗಳನ್ನು ಹಿಂತೆಗೆಯಬೇಕು. ಕಾರ್ಮಿಕ ಸಂಘಗಳ ರಾಷ್ಟ್ರೀಯ ಹೋರಾಟ ಸಮಿತಿ ಸಲ್ಲಿಸಿದ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು. ಕೈಗಾರಿಕೆಗಳ ಮುಚ್ಚುವಿಕೆ, ಲಾಕೌಟ್‌ಗಳನ್ನು ತಡೆಹಿಡಿಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.

10 ಆರ್ಥಿಕ ಸ್ವಾವಲಂಬನೆಯ ರಾಷ್ಟ್ರೀಯ ಧೋರಣೆಯನ್ನು ಪುನಃ ಅನುಷ್ಠಾನದಲ್ಲಿ ತರಬೇಕು. ಬಡ ಮತ್ತು ಕಾರ್ಮಿಕ ವರ್ಗಕ್ಕೆ ಅಪಾಯ ಉಂಟು ಮಾಡಿ ದೊಡ್ಡ ಗುತ್ತೇದಾರಿ ಮನೆತನಗಳಿಗೆ ಮತ್ತು ಬಹುರಾಷ್ಟ್ರೀಯ ಕಾರ್ಪೋರೇಶನ್‌ಗಳಿಗೆ ಪ್ರೋತ್ಸಾಹ ನೀಡುವಂಥ ಬಂಡವಾಳ ಹೂಡುವಿಕೆಯ, ಹಣಕಾಸಿನ, ನೀತಿಯನ್ನು ಬಿಟ್ಟು ಬಿಡಬೇಕು.

11 ದಲಿತರು, ಗುಡ್ಡಗಾಡು ಜನರು, ಧಾರ್ಮಿಕ ಅಲ್ಪ ಮತಸ್ತರು, ಮಹಿಳೆಯರು ಹಾಗೆಯೇ ಇತರ ನಿರ್ಬಲ ವರ್ಗದವರ ಮೇಲೆ ಆರ್ಥಿಕವಾಗಿಯೂ, ದೈಹಿಕವಾಗಿಯೂ ನಡೆಸಲಾಗುತ್ತಿರುವ ದಮನಕಾರಿ ಕೃತ್ಯಗಳನ್ನು ನಿಲ್ಲಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.

ಎಲ್ಲ ಪ್ರಜಾಪ್ರಭುತ್ವವಾದಿ ಪಕ್ಷಗಳೂ, ಸಾಮೂಹಿಕ ಸಂಘಟನೆಗಳೂ ವ್ಯಕ್ತಿಗಳೂ ಹಾಗೆಯೇ ಕಾಂಗ್ರೆಯ ಕ್ರಮಗಳಿಂದ ಅಸಮಾಧಾನಗೊಂಡ ಕಾಂಗ್ರೆಸ್ ಮುಖಂಡರೂ ಈ ಬೇಡಿಕೆಗಳಿಗೆ ಬೆಂಬಲ ನೀಡಲು ಮುಂದೆ ಬರಬೇಕೆಂದು ಸಮ್ಮೇಳನ ವಿನಂತಿ ಮಾಡಿಕೊಳ್ಳುತ್ತದೆ.

ಜನತೆಯ ದೃಢ ನಿರ್ಧಾರ ಮಾತ್ರ ಕೇಂದ್ರ ಸರಕಾರದ ಧೋರಣೆ ಮತ್ತು ಕೃತಿಯಲ್ಲಿಯ ವಿಚಾರ ಧಾರೆಗೆ ಹಿಂದೇಟು ಹಾಕಬಹುದಾಗಿದೆ.

ಇಡೀ ದೇಶದಲ್ಲಿ ಜನತೆಯನ್ನು ಹೋರಾಟಕ್ಕಿಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಅವಶ್ಯಕತೆಯನ್ನು ಸಮ್ಮೇಳನ ಅರ್ಥಮಾಡಿಕೊಂಡಿದೆ.

○

ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳಿಗೆ ಎಸ್.ಎಫ್.ಐ. ಬೆಂಬಲ

ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು 1975 ರ ತುರ್ತುಪರಿಸ್ಥಿತಿ ವಿರೋಧಿ, ಪ್ರಜಾಪ್ರಭುತ್ವ ಪುನರ್ ಸ್ಥಾಪನಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ವಿದ್ಯಾರ್ಥಿ ಸಮುದಾಯವು ಇದೀಗ ದೇಶದ ಹಿತರಕ್ಷಣೆಗೆ 8ನೇ ಲೋಕಸಭಾ ಚುನಾವಣೆಯಲ್ಲಿ ಸಕ್ರಿಯ ಪ್ರಚಾರದಲ್ಲಿ ತೊಡಗಲು ಭಾರತ ವಿದ್ಯಾರ್ಥಿ ಫೆಡರೇಷನ್ [ಎಸ್.ಎಫ್.ಐ.] ಕರ್ನಾಟಕ ರಾಜ್ಯ ಸಮಿತಿಯು ಕರೆ ನೀಡಿದೆ.

ರಾಷ್ಟ್ರದ ಸಮಗ್ರತೆ ಮತ್ತು ಪ್ರಜಾಪ್ರಭುತ್ವ ಸಂರಕ್ಷಣೆಯ ಹಿತದೃಷ್ಟಿಯಿಂದ ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಪಕ್ಷವನ್ನು ಸೋಲಿಸಲು ಹಾಗೂ ಕೋಮುವಾದಿ, ಛಿದ್ರಕಾರಿ ಶಕ್ತಿಗಳನ್ನು ವಿರೋಧಿಸಲು ಮತ್ತು ಎಡ-ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸಲು ಎಸ್.ಎಫ್.ಐ. ಮತದಾರರಿಗೆ ವಿನಂತಿಸಿದೆ.

ಕರ್ನಾಟಕದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಡ ಪಕ್ಷಗಳೊಂದಿಗೆ ಹೊಂದಾಣಿಕೆ ಮೂಲಕ ಅಧಿಕಾರಕ್ಕೆ ಬಂದ ಜನತಾ ಪಕ್ಷವು ಈ ಚುನಾವಣೆಯಲ್ಲಿ ಎಡಪಕ್ಷಗಳಿಗೆ ಸೂಕ್ತ ಮಾನ್ಯತೆ ನೀಡದೆ ಕೋಮುವಾದಿ ಬಿ.ಜೆ.ಪಿ. ಯೊಂದಿಗೆ ಮೈತ್ರಿ ಬೆಳೆಸಿರುವುದಕ್ಕೆ ಎಸ್.ಎಫ್.ಐ. ರಾಜ್ಯ ಸಮಿತಿಯು ತೀವ್ರ ವಿಷಾದ ವ್ಯಕ್ತಪಡಿಸಿದೆ.

ರಾಷ್ಟ್ರದ ಹಿತದೃಷ್ಟಿಯಿಂದ ಡಿಸೆಂಬರ್ 24 ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಜನತಾ ಸಿಪಿಐ [ಎಂ] ಮತ್ತು ಸಿ.ಪಿ.ಐ. ಅಭ್ಯರ್ಥಿಗಳಿಗೆ ಹಾಗೂ ಬಿಜೆಪಿ ಸ್ಪರ್ಧಿಸಿರುವ ಕ್ಷೇತ್ರಗಳಲ್ಲಿ ಕಾಂಗ್ರೆಯೇತರ ಪ್ರಗತಿಪರ ಅಭ್ಯರ್ಥಿಗಳನ್ನು ಬೆಂಬಲಿಸಿ ಸಕ್ರಿಯ ಪ್ರಚಾರ ನಡೆಸಲು ಎಸ್.ಎಫ್.ಐ. ಶಾಖೆಗಳಿಗೆ ರಾಜ್ಯ ಸಮಿತಿಯ ಪರವಾಗಿ ಕಾರ್ಯದರ್ಶಿ ಎಸ್.ಆರ್. ಆರಾಧ್ಯ ಕರೆ ನೀಡಿದ್ದಾರೆ.

○

ಧಾರವಾಡ

ಫ್ಲೈವುಡ್ ಕಾರ್ಖಾನೆಯಲ್ಲಿ ಸಾಂಕೇತಿಕ ಮುಷ್ಕರ

ಡಿಸೆಂಬರ್ 15 ರಂದು ಧಾರವಾಡದಲ್ಲಿ ಫ್ಲೈವುಡ್ ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಅಮಾನತುಗೊಳಿಸಿದ 5 ಕಾರ್ಮಿಕರನ್ನು [4 ಜನರ ವಿಚಾರಣೆ ಮುಗಿದಿದೆ] ವಾಪಸ್ ನೌಕರಿಗೆ ತೆಗೆದುಕೊಳ್ಳುವಂತೆ ಒತ್ತಾಯಿಸಲು ಮತ್ತು ವಿನಾಕಾರಣ ಇತ್ತೀಚಿಗೆ ಕಾರ್ಮಿಕರಿಗೆ ಶೋಕಾಸ್‌ನೋಟೀಸ್,ಚಾರ್ಜ್‌ಶೀಟ್‌ಗಳನ್ನು ಕೊಡುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಲಾಯಿತು. ಮುಷ್ಕರ ಸಂಪೂರ್ಣ ಯಶಸ್ವಿ ಆಯಿತು.

ಟೈವಾಕ ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ ಪ್ರತಿಭಟಿಸಲು ಅವರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಟೈವಾಕ ಕಾರ್ಮಿಕರು ಕೂಡ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಆಚರಿಸಿದರು. ಕಾರ್ಮಿಕರು ಮುಷ್ಕರ ಆಚರಿಸಿದರೆ ಸ್ಟಾಫ್ ಅಸೋಸಿಯೆಶನ್‌ನ ಸದಸ್ಯರು ತಾವೇ ಮಾಲಿಕರೇನೊ ಎಂಬಂತೆ ಕಂಪನಿಯಲ್ಲಿ ಕಛೇರಿ ಕೆಲಸವನ್ನು ಮಾಡಿ ದುಡಿಯುವ ಜನರ ಕತ್ತು ಕುಯ್ಯುವ ಪ್ರಯತ್ನವನ್ನು ಮಾಡಿದರು.

ಸಾಂಕೇತಿಕ ಮುಷ್ಕರದ ಅಂಗವಾಗಿ ಎರಡು ಕಾರ್ಖಾನೆಯ ಕಾರ್ಮಿಕರು ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಮನವಿ ಕೊಟ್ಟರು. ಮೆರವಣಿಗೆಯ ನೇತೃತ್ವವನ್ನು ಎಂ. ಬಿ. ಕಟ್ಟಿ. ಅನ್ವರ ದೇಸಾಯಿ ಇತರರು ವಹಿಸಿದ್ದರು.

ಮೈಸೂರು ಬಂದ್

ಮೈಸೂರಿನ ಕೆ.ಆರ್.ಮಿಲ್‌ಮತ್ತು ಐಡಿಯಲ್ ಜಾವಾ ಕಾರ್ಖಾನೆಗಳ ಆಡಳಿತ ವರ್ಗದವರು ಕೆಲವು ತಿಂಗಳಿಂದ ಮುಚ್ಚಿರುವುದನ್ನು ಪ್ರತಿಭಟಿಸಿ ಇಲ್ಲಿನ ಸಿ. ಐ. ಟಿ. ಯು. ಮತ್ತು ಇದರ ಕೇಂದ್ರ ಕಾರ್ಮಿಕ ಸಂಘಟನೆಗಳ ಕ್ರಿಯಾ ಸಮಿತಿ ಕೊಟ್ಟಿದ್ದ ಕರೆಯ ಮೇರೆಗೆ ತಾ 13-12-84 ರಂದು ಸಂಪೂರ್ಣ ಯಶಸ್ವಿ ಮೈಸೂರು ಬಂದ್ ಅನ್ನು ಆಚರಿಸಲಾಯಿತು. ವಿವಿಧ ಕಾರ್ಮಿಕ ಸಂಘಗಳ ಮೆರವಣಿಗೆ ಘೋಷಿಸಲಾಯಿತು. ಇದರ ನೇತೃತ್ವವನ್ನು ಸಂಗಾತಿಗಳಾದ ಮೋಹನ್ ಕುಮಾರ್, ಸಿ. ಕೆ. ಮೋಹನ್, ಅಣ್ಣಪ್ಪ, ಮತ್ತು ಜಯರಾಂ ಅವರುಗಳು ವಹಿಸಿದ್ದರು.

ಬಹಿರಂಗ ಸಭೆ

ಮೈಸೂರು ಟೌನ್ ಹಾಲ್ ಮೈದಾನದಲ್ಲಿ 11-12-84 ರಂದು ಸಿ.ಪಿ.ಐ. [ಎಂ] ಆಶ್ರಯದಲ್ಲಿ ನಡೆದ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಶಾಸಕ ಕಾಂ. ಎಸ್ ಸೂರ್ಯನಾರಾಯಣರಾವ್ ಮತ್ತು ಕಾಂ. ಕೆ. ನಂಜುಂಡಪ್ಪ ನವರುಗಳು ಮಾತನಾಡಿ ದೇಶದ ಈಗಿನ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸ್ [ಐ] ಆಡಳಿತಕ್ಕೆ ಬಂದರೆ ಸಂಸದೀಯ ಜನತಂತ್ರ ವ್ಯವಸ್ಥೆಗೆ ಒದಗುವ ಅಪಾಯವನ್ನು ತಿಳಿಸಿ, ಕಾಂಗ್ರೈ ಮತ್ತು ಜಾತಿವಾದಿ, ಕೋಮುವಾದಿ ಪಕ್ಷಗಳನ್ನು ಸೋಲಿಸಬೇಕೆಂದು ಕರೆಯಿತ್ತರು. ಮೈಸೂರು ಚಾಮರಾಜನಗರ ಲೋಕಸಭಾ ಕ್ಷೇತ್ರಗಳಲ್ಲಿ ಜನತಾ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಕೋರಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಎನ್. ಉಗ್ರಪ್ಪನವರು ವಹಿಸಿದ್ದರು.

○

(5ನೇ ಪುಟದಿಂದ)
ಹಾಗೂ ಜನತೆಗೆ ಹಲವು ಪರಿಹಾರಗಳನ್ನು ನೀಡುವಲ್ಲಿ ಉತ್ತಮ ಉದಾಹರಣೆಗಳನ್ನು ದೇಶದ ಮುಂದಿಟ್ಟಿವೆ, ಅವುಗಳ ಪ್ರಯತ್ನಗಳಿಂದಾಗಿ ಕೇಂದ್ರ ರಾಜ್ಯಗಳ ಸಂಬಂಧಗಳ ಪುನರ್ರಚನೆ ಈಗ ಎಲ್ಲಾ ವಿರೋಧ ಪಕ್ಷಗಳ ಸರ್ವ ಸಾಮಾನ್ಯ ಬೇಡಿಕೆಯಾಗಿ ಮಾರ್ಪಟ್ಟಿದೆ.

ಅಷ್ಟೇ ಅಲ್ಲ, ಸರ್ವಾಧಿಕಾರೀ ಪ್ರವೃತ್ತಿಯನ್ನು ವಿರೋಧಿಸುವಲ್ಲಿ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತತೆಯನ್ನು ರಕ್ಷಿಸುವಲ್ಲಿ, ಜನರ ಐಕ್ಯತೆಯನ್ನು ಹಾಗೂ ದೇಶದ ಸಮಗ್ರತೆಯನ್ನು ಕಾಪಾಡುವಲ್ಲಿ ಮತ್ತು ದೇಶವನ್ನು ಛಿದ್ರಗೊಳಿಸಲು ಹಾಗೂ ಜಗತ್ತನ್ನು ನ್ಯೂಕ್ಲಿಯರ್ ವಿನಾಶದ ಅಂಚಿಗೆ ತಳ್ಳಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಸಂಚುಗಳನ್ನು ವಿರೋಧಿಸುವಲ್ಲಿ ಅಚಲ ಹೋರಾಟಗಾರರೆಂದರೆ ಸಿ. ಪಿ. ಐ (ಎಂ) ಹಾಗೂ ಇತರ ಎಡ ಶಕ್ತಿಗಳು ಮಾತ್ರ ಎನ್ನುವ ವಾಸ್ತವ ಸಂಗತಿಯನ್ನು ಕಾ. ಸುರಜಿತ್ ತಮ್ಮ ದೂರದರ್ಶನ ಭಾಷಣದಲ್ಲಿ ದೇಶದ ಮತದಾರರ ಗಮನಕ್ಕೆ ತಂದರು.

ಕಾಂಗ್ರೈ - ಬಿಜೆಪಿಗಳನ್ನು ಸೋಲಿಸಿರಿ

[1ನೇ ಪುಟದಿಂದ]

ಚುನಾವಣೆಯಲ್ಲಿ ವಿರೋಧ ಪಕ್ಷಗಳು ಬಹುಮತ ಪಡೆದದ್ದಾದರೆ ತಾವೆಲ್ಲರು ಸೇರಿ ಪ್ರಧಾನಮಂತ್ರಿಯವರನ್ನು ಆರಿಸಲು ಯಾವನೇ ತೊಂದರೆಯಾಗುವುದಿಲ್ಲೆಂದು, ಕಾಂಗ್ರೆಸ್ಸಿನವರು ರಾಜೀವ ಗಾಂಧಿಯನ್ನು ರೆಡಿಮೇಡ್ ಪ್ರಧಾನ ಮಂತ್ರಿಯನ್ನಾಗಿ ಜನರಿಗೆ ತೋರಿಸಿ ಕೊಡುತ್ತಿರುವಂತೆ ವಿರೋಧ ಪಕ್ಷಗಳು ಕಾಂಗ್ರೈದಾರಿಯಲ್ಲೇ ಹೋಗುವುದು ಸರಿಯಲ್ಲವೆಂದೂ ಹೇಳಿದರು.

ಕಳೆದ ಐದು ವರ್ಷಗಳ ಇಂದಿರಾ ಗಾಂಧಿಯ ಆಡಳಿತೆಯ ಫಲವಾಗಿ ಎಂಟನೆಯ ಲೋಕಸಭೆ ಚುನಾವಣೆ ನಡೆಯುತ್ತಿರುವಾಗ, ಪಂಜಾಬ್-ಅಸ್ಸಾಂ ರಾಜ್ಯಗಳಲ್ಲಿ ಚುನಾವಣೆಯಿಲ್ಲೆಂದು ಸಾರಲಾಗಿದೆ. ರಾಜೀವ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದು ಇನ್ನೈದು ವರ್ಷಗಳಲ್ಲಿ ಬರುವ ಒಂಭತ್ತನೆಯ ಲೋಕಸಭಾ ಚುನಾವಣೆಯಲ್ಲಿ ಇನ್ನೆಷ್ಟು ರಾಜ್ಯಗಳಲ್ಲಿ ಚುನಾವಣೆ ನಡೆಯುವುದಿಲ್ಲೆಂದು ಘೋಷಿಸಲಾಗುವುದೋ -ಎಂಬ ಸಂಶಯವನ್ನು ವ್ಯಕ್ತಪಡಿಸಿ ಕಾಂಗ್ರೈ ಆಡಳಿತೆಯಿಂದಾಗಿ ದೇಶಕ್ಕಾಗತಕ್ಕ ಅಪಾಯವನ್ನು ನಿವಾರಿಸುವ ಸಲುವಾಗಿ ಕಾಂಗ್ರೈ ಪಕ್ಷವನ್ನು ಸೋಲಿಸಲೇ ಬೇಕೆಂದು ಹೇಳಿದರು.

ಕರ್ನಾಟಕ ರಾಜ್ಯದಲ್ಲಿ ಸಿಪಿಐ (ಎಂ) ಜನತಾ ಪಕ್ಷದ ಸರಕಾರಕ್ಕೆ ಬೆಂಬಲ ಕೊಡುತ್ತಿರುವುದರಿಂದ, ಈ ಚುನಾವಣೆಯಲ್ಲಿ ಜನತಾ ಪಕ್ಷ ಬಿಜೆಪಿ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುವುದಕ್ಕಾಗಿ ನಾವು ಬಜೆಪಿಯನ್ನು ಬೆಂಬಲಿಸ ಬೇಕಾದ್ದಿಲ್ಲ. ಅದನ್ನು ನಾವು ವಿರೋಧಿಸುತ್ತೇವೆ. ಯಾಕಂದರೆ ವಿದೇಶೀ ಹಾಗೆಯೇ ರಾಷ್ಟ್ರೀಯ ನೀತಿಗಳಲ್ಲಿ ಅವರಿಗೂ ನಮ್ಮ ಪಕ್ಷಕ್ಕೂ ಬಹಳ ಭಿನ್ನಾಭಿಪ್ರಾಯಗಳಿವೆ. ಬಿಜೆಪಿ ಒಂದು ಜಾತೀಯ ಪಕ್ಷವಾಗಿದೆ. ಆದ್ದರಿಂದ ಅದನ್ನು ಬೆಂಬಲಿಸುವ ಪ್ರಶ್ನೆಯಿಲ್ಲೆಂದು ಅವರು ಹೇಳಿ, ಸಿಪಿಐ (ಎಂ) ಉಮೇದುವಾರರಾದ ಕೆ. ಆರ್. ಶ್ರೀಯಾನ್ ಅವರಿಗೆ ಮತ ನೀಡಬೇಕೆಂದು ವಿನಂತಿ ಮಾ ಡಿ ಕೊಂ ಡ ರು. ಕೆ ಆರ್. ಶ್ರೀಯಾನ್, ಎನ್. ಕೆ. ಉಪಾಧ್ಯಾಯ, ಪಿ. ರಾಮಚಂದ್ರರಾವ್ ಅವರೆಲ್ಲರೂ ಭಾಷಣ ಮಾಡಿದರು.

ಕುಂದಾಪುರ ಸಭೆಯಲ್ಲಿ ಎನ್. ಕೆ. ಉಪಾಧ್ಯಾಯರು ಅಧ್ಯಕ್ಷರಾಗಿದ್ದರು ಅಬ್ರಹಾಂ ಕರ್ಕಡ ಅವರು ಆಭಾರ ಮನ್ನಿಸಿ, ಸಿ. ಕುಂದರ ಸ್ವಾಗತಿಸಿದರು ಉಡುಪಿಯಲ್ಲಿ ಡೇವಿಡ್ ಕರ್ಕಡ ಅವರು ಸ್ವಾಗತಿಸಿದರು.

ಶಾಸಕರಾದ ಬಿ. ರಾಮಚಂದ್ರ ರಾವ್ ಅಧ್ಯಕ್ಷತೆ ವಹಿಸಿದ್ದರು.

ಉಡುಪಿ ಮತಕ್ಷೇತ್ರದಿಂದ ಹೋದ ಸಲ ಕಾಂಗ್ರೈ ಪಕ್ಷದಿಂದ ಲೋಕಸಭೆಗೆ ಆರಿಸಿ ಹೋಗಿದ್ದ ಆಸ್ಕರ್ ಫರ್ನಾಂಡೀಸರು ಎ.ಐ.ಸಿ.ಸಿ.ಯ ಕಾರ್ಯದರ್ಶಿಯಾಗಿದ್ದುದರಿಂದ ತಮ್ಮ ಮತಕ್ಷೇತ್ರವನ್ನು ಸಂದರ್ಶಿಸಿ ಜನರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಈಗ ಮತ್ತೆ ಮತಯಾಚನೆಗೆ ಬಂ ದಿ ದ್ದಾ ರೆಂಬ ಆರೋಪಕ್ಕೆ ಮಂಗಳೂರಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ರಾಜೀವ ಗಾಂಧಿಯವರು ಉತ್ತರ ನೀಡುತ್ತ "ಅವೆಲ್ಲ ನನ್ನ ತಪ್ಪು" ಎಂದು ಹೇಳಿದ್ದಕ್ಕೆ ಎನ್. ಕೆ. ಉಪಾಧ್ಯಾಯರು. ಪ್ರತಿಕ್ರಿಯೆ ವ್ಯಕ್ತ ಮಾಡುತ್ತಾ ಈ ಸಲ ಮತ್ತೆ ಆಸ್ಕರ್ ಫರ್ನಾಂಡೀಸ್ ಅವರನ್ನೇ ಆರಿಸಿ ಕಳುಹಿಸಿದರೆ ಮುಂದೆ ಅವರು ಈ ಮತ ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗುತ್ತಾರೆಂಬ ಭರವಸೆಯನ್ನು ರಾಜೀವ ಗಾಂಧಿಯವರು ನೀಡುತ್ತಾರೆಯೇ ಎಂಬ ಪ್ರಶ್ನೆಯನ್ನು ಸಾರ್ವಜನಿಕರ ಮುಂದಿಟ್ಟು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರೈತ-ಕಾರ್ಮಿಕರ ಹಾಗೆಯೇ 'ಸಾರ್ವಜನಿಕರನ್ನು ಸಂಘಟಿಸಿ ಹೋರಾಟಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತದೆಂದು, ಸಾರ್ವಜನಿಕರಲ್ಲಿ ರಾಜಕೀಯ ಪ್ರಜ್ಞೆ. ಉಂಟು ಮಾಡಲು ಪ್ರಯತ್ನಿಸುತ್ತದೆಂದೂ, ತಾವು ನಡೆಸುತ್ತಿರುವ ರಾಜಕೀಯ ಹೋರಾಟದ ಒಂದು ಅಂಗವಾಗಿ ಈ ಚುನಾವಣೆಯನ್ನು ಪರಿಗಣಿಸುತ್ತದೆಂದೂ ಹೇಳಿ ತಮ್ಮ ಪಕ್ಷ ಗೆಲ್ಲಲಿ ಸೋಲಲಿ, ರೈ ತ ರ- ಕಾರ್ಮಿಕರ ಹಾಗೆಯೇ ಇತರ ಜನವಿಭಾಗದವರನ್ನು ಸಂಘಟಿಸಿ ಚಳುವಳಿ ಮಾಡುವ ಕಾರ್ಯವನ್ನು ಇನ್ನೂ ಹೆಚ್ಚು ಸ್ಫೂರ್ತಿಯಿಂದ ಮುಂದುವರಿಸುತ್ತದೆಂದು ಹೇಳಿದರು.

ಉಡುಪಿ ಮತ ಕ್ಷೇತ್ರದ ಉಮೇದುವಾರರಾದ ಕೆ. ಆರ್. ಶ್ರೀಯಾನ್ ಅವರು ತಮ್ಮ ಭಾಷಣದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆ, ಮುಂಬಯಿ ಮಂಗಳೂರು ಕರಾವಳಿ ರೇ ಲ್ವೆ ಮಂಗಳೂರಿನಲ್ಲಿ ಪೆಟ್ರೋಕೆಮಿಕಲ್ ಸ್ಥಾವರಗಳ ಕುರಿತು ಜನರ ಗಮನ ಸೆಳೆಯುತ್ತಾ ಹೋದ ಚುನಾವಣೆಯಲ್ಲಿ ಕಾಂಗ್ರೈ ಪಕ್ಷದಿಂದ 27 ಜನ ಲೋಕಸಭೆಗೆ ಆರಿಸಿ ಬಂದಿದ್ದರೂ ಕೂಡ ಕರ್ನಾಟಕದ, ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ಏನು ಮಾಡಿದ್ದಾರೆಂದು ಸವಾಲು ಹಾಕಿ ಬಂಡವಲದಾರರ ಭೂ ಮಾಲಕರ ಪರವಾಗಿರುವ ಕಾಂಗ್ರೈ ಸರ್ಕಾರದಿಂದ ಜಿಲ್ಲೆಯ ಹಾಗೆಯೇ ದೇಶದ ಅಭಿವೃದ್ಧಿಯಾಗಲು ಸಾಧ್ಯವಿಲ್ಲೆಂದು ಹೇಳಿ ಕಮ್ಯೂನಿಸ್ಟ್ ಪಕ್ಷಗಳ, ಪ್ರಾಂತ ರೈತ ಸಂಘದ ಸತತ ಪ್ರಯತ್ನ ಹಲವಾರು ಹೋರಾಟಗಳಿಂದಾಗಿಯೇ ಕರ್ನಾಟಕದ ಹೆಗಡೆ ಸರ್ಕಾರ ಗೇಣಿದಾರರಿಗೆ ಪುಕ್ಕಟೆ ಭೂಮಿಯ ಒಡೆತನ, ಭೂ ಪರಿವರ್ತನೆ ಮತ್ತು ತುಂಡು ಭೂ ಮಿ ಕಾಯಿದೆಯ ತೊಂದರೆ ನಿವಾರಣೆ ಮೊದಲಾದ ಪುರೋಗಾಮಿ ಕ್ರಮ ಕೈಗೊಂಡಿದ್ದರೂ ಬಿ. ಜೆ. ಪಿ. ಯಂಥ ಪಕ್ಷಗಳು ತಮ್ಮಿಂದಲೇ ಅದು ಸಾಧಿಸಲ್ಪಟ್ಟಿದೆಂದು ಹೇ ಳು ತ್ತಿ ರು ವುದನ್ನು ಟೀಕಿಸಿ, ದುಡಿಯುವ ವರ್ಗದ ಚಳುವಳಿ ಹೋರಾಟಗಳಿಲ್ಲದೆ ಯಾವ ಸಮಸ್ಯೆಗಳೂ ಪರಿಹಾರ ಕಾಣಲಾರವೆಂದು ಹೇಳಿದರು.

○

ಸಿರ್ಸಿಯಲ್ಲಿ ಮನೆ ಇಲ್ಲದವರಿಗೆ ಮನೆ ಸಿಗಲಿ

ಕಾರವಾರ ಜಿಲ್ಲೆಯ ಸಿರ್ಸಿ ನಗರದಲ್ಲಿ ಮನೆಇಲ್ಲದವರಿಗೂ, ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ವಾಸ್ತವ್ಯ ಮಾಡುವವರಿಗೆಲ್ಲ ಕೂಡಲೇ ಪಟ್ಟಾ ವಿತರಣೆ ಮಾಡಬೇಕೆಂದು ಸಿರ್ಸಿಯ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸರ್ಕಾರವನ್ನು ಒತ್ತಾಯ ಮಾಡಿದೆ. ಈ ಹಿಂದೆ ಪ್ರಾಂತ ರೈತಸಂಘ ಮತ್ತು ಸಿ. ಐ. ಟಿ. ಯು. ಜಂಟಿಯಾಗಿ ರಾಜಾದ್ಯಂತ ಹೋರಾಟ ಮಾಡಿದಾಗ, ನಿವೇಶನರಹಿತರು ಸರ್ಕಾರಿ ಭೂಮಿಯಲ್ಲಿ ಒತ್ತುವರಿ ಮಾಡಿದ್ದನ್ನು ಸರಿಪಡಿಸಿ ಅವರವರ ಹೆಸರಲ್ಲಿ ಪಟ್ಟಾ ಕೊಡಲಾಗುವುದೆಂಬ ಆಶ್ವಾಸನೆ ನೀಡಿದ್ದರೂ, ಅನಂತರ ಇದರ ಕುರಿತು ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಸಿರ್ಸಿಯ ಸಿ. ಪಿ. ಐ. (ಎಂ)ಪಕ್ಷ ಹೋರಾಟದ ಕಾರ್ಯಕ್ರಮ ಹಮ್ಮಿಕೊಂಡಿದೆ. ಮುಂದಿನ ತಿಂಗಳಲ್ಲಿ ಹೋರಾಟ ಮಾಡಲು ನಿರ್ಧರಿಸಲಾಗಿದೆ.

○

ಸಿ ಪಿ ಐ [ಎಂ], ಸಿಪಿಐ, ಜನತಾ ಡಿಎಂಕೆಪಿ ಅಭ್ಯರ್ಥಿಗಳಿಗೆ ಮತ ನೀಡಿ

ಚುನಾವಣೆ ದಿನ ಸಂಬಳ ಸಹಿತ ರಜಾ
ಸಿ.ಐ.ಟಿ.ಯು. ಒತ್ತಾಯ

24-12-84 ರಂದು ನಡೆಯಲಿರುವ ಲೋಕ ಸಭಾ ಚುನಾವಣೆಯ ದಿನದಂದು ಎಲ್ಲಾ ಖಾಸಗಿ ಕಾರ್ಖಾನೆ ಮತ್ತು ಇತರ ಅಸಂಘಟಿತ ಕಾರ್ಮಿಕರ ಸಂಬಳ ಸಮೇತ ರಜಾ ಘೋಷಿಸಲು ಮಾಲೀಕರಿಗೆ ಆಜ್ಞೆ ನೀಡಬೇಕೆಂದು ಸಿ. ಐ. ಟಿ. ಯು. ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

ರಾಜ್ಯ ಸರ್ಕಾರಿ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಲು ಅವಕಾಶವಿಲ್ಲದಿದ್ದರೂ ಚುನಾವಣೆ ದಿನದಂದು ರಜ ಪಡೆದಿರಬೇಕಾದರೆ- ಖಾಸಗಿ ಕ್ಷೇತ್ರಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಲು ಎಲ್ಲ ಅವಕಾಶಗಳಿದ್ದರೂ ಚುನಾವಣಾ ದಿನದಂದು ಸಂಬಳ ಸಮೇತ ರಜ ಘೋಷಿಸದೆ ಇರುವುದು ತುಂಬಾ ಆಶ್ಚರ್ಯಕರವಾದುದು.

ಇದರ ಬಗ್ಗೆ ಕಾರ್ಮಿಕ ಕಮಿಷನರ್ ರವರು ಒಂದು ಹೇಳಿಕೆ ನೀಡಿ ಚುನಾವಣಾ ದಿನದಂದು ಎಲ್ಲಾ ಖಾಸಗಿ ಕಾರ್ಖಾನೆಯವರು ಕಾರ್ಖಾನೆಗೆ ರಜಾ ಘೋಷಿಸಿ ತಕ್ಷಣ ಬರುವ ಅವರ ವಾರದ ರಜಾ ದಿನದಂದು ಕೆಲಸ ಮಾಡಿಸಬೇಕೆಂದು ತಿಳಿಸಿರುವುದು ಹಾಸ್ಯಾಸ್ಪದ ಮತ್ತು ಅವರ ಕಾರ್ಮಿಕ ವಿರೋಧಿನೀತಿಯನ್ನು ಸೂಚಿಸುತ್ತದೆ. ಇಂತಹ ಸಹಾಯವನ್ನು ಕಾರ್ಮಿಕ ಕಮಿಷನರ್ ಅವರಿಂದ ಕಾರ್ಮಿಕರು ಬಯಸಿರಲಿಲ್ಲ. ಇಂತಹ ಹೇಳಿಕೆಯಿಂದ ಕಾರ್ಮಿಕರಿಗೆ ಸಂಕಟ ಪರಿಸ್ಥಿತಿಯನ್ನು ಕಾರ್ಮಿಕ ಕಮಿಷನರ್ ಉಂಟು ಮಾಡಿದ್ದು ಇವರ ಇಂತಹ ವರ್ತನೆಯು ಉದ್ಧಟತನದ್ದಾಗಿದ್ದು ಇದನ್ನು ಸಿ. ಐ. ಟಿ. ಯು, ಉಗ್ರವಾಗಿ ಖಂಡಿಸುತ್ತದೆಂದು ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಂ ಹೇಳಿಕೆಯೊಂದರಲ್ಲಿ ಹೇಳಿದ್ದಾರೆ.

ಕಾ|| ಶ್ರೀಯಾನ್ - ವ್ಯಕ್ತಿ ಪರಿಚಯ

(1ನೇ ಪುಟದಿಂದ)

ತ್ತಾರೆ. ಕಾರ್ಮಿಕ ವರ್ಗದ ರಾಷ್ಟ್ರೀಯ ಸಂಘಟನೆಯಾದ ಸಿ. ಐ. ಟಿ. ಯು. ವಿನ ಜನರಲ್ ಕೌನ್ಸಿಲ್ ಸದಸ್ಯರೂ ಆಗಿರುತ್ತಾರೆ.

ಬಸ್ ದರ ಏರಿಕೆಯ ವಿರುದ್ಧ, ಬೆಲೆ ಏರಿಕೆಯ ವಿರುದ್ಧ ಇತ್ಯಾದಿಯಾಗಿ ಜನಸಾಮಾನ್ಯರ ವಿ ವಿ ಧ ಸಮಸ್ಯೆಗಳ ವಿಷಯದಲ್ಲಿ ನಡೆದ ಅಸಂಖ್ಯ ಹೋರಾಟಗಳಲ್ಲಿ ಕಾಂ. ಕೆ. ಆರ್. ಶ್ರೀಯಾನ್ ಅವರು ನೇತೃತ್ವ ನೀಡಿದ್ದಾರೆ. ರೈತ ರಂಗದಲ್ಲಿ ಅಸಂಖ್ಯ ಹೋರಾಟಗಳನ್ನು ನಡೆಸಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಭೂ ಸುಧಾರಣೆಗಾಗಿ ನಡೆದ ಹೋರಾಟಗಳಲ್ಲಿ ಮಂಗಳೂರಿನ ರೈತರಿಗೆ ನೇತೃತ್ವ ನೀಡಿದ ಇವರು ದೀರ್ಘ ಕಾಲದವರೆಗೆ ಮಂಗಳೂರು ತಾಲೂಕು ರೈತ ಸಂಘದ ಅಧ್ಯಕ್ಷರೂ ಆಗಿದ್ದರು. ಒಕ್ಕಲೆಬ್ಬಿಸುವ ಭೂ ಮಾಲಕರ ವಿರುದ್ಧ ರೈತರನ್ನು ಸಂಘಟಿಸಿ, ಅನೇಕ ಹೋರಾಟಗಳನ್ನು ನಡೆಸಿದ್ದಾರೆ.

ಯುವ ಜನರ ಸಂಘಟನೆಯಲ್ಲಿ ಶ್ರೀಯುತರ ದುಡಿಮೆ ಅಪಾರ. 1955 ರಲ್ಲಿ ಮಂಗಳೂರಿನಲ್ಲಿ ಡೆಮೊಕ್ರಾಟಿಕ್ ಯೂತ್‌ಲೀಗ್ ಎಂಬ ಯುವಜನ ಸಂಘಟನೆಯನ್ನು ಸ್ಥಾ ಪಿ ಸಿ ದ ರು. ಮುಂದೆ ಮಂಗಳೂರು ತಾಲೂಕಿನ ಅನೇಕ ಕಡೆಗಳಲ್ಲಿ ಯುವಕ ಸಂಘಗಳನ್ನು ಸ್ಥಾಪಿಸಿದರು. ಕೊಂಚಾಡಿ ಯುವಕ ಕಲಾ ಮಂಡಲದ ಅಧ್ಯಕ್ಷರಾಗಿ ಈಗಲೂ ಮುಂದುವರೆಯುತ್ತಿದ್ದಾರೆ. ಪೀಪಲ್ಸ್ ಥಿಯೇಟರ್ಸ್ ಮಂಗಳೂರು ಇದರ ಸಂಚಾಲಕರೂ ಆಗಿದ್ದಾರೆ.

ದೇರೆಬೈಲು ಮತ್ತು ಬೋಳೂರು ಬಿ. ಪಂಚಾಯತಿನ ಉಪಾಧ್ಯಕ್ಷರಾಗಿ, ಮಂಗಳೂರು ತಾಲೂಕು ಬೋರ್ಡಿನ ಸದಸ್ಯರಾಗಿ, ಕಾವೂರು ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ, ಕೊಂಚಾಡಿಯ ಶ್ರೀ ರಾಮಾಶ್ರಯ ಹೈಸ್ಕೂಲಿನ ಟ್ರಸ್ಟ್ ಬೋರ್ಡಿನ ಸದಸ್ಯರಾಗಿ ಸಾಮಾಜಿಕ ರಂಗದಲ್ಲಿ ದೀರ್ಘ ಕಾಲದಿಂದ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ.

ಕಾರ್ಮಿಕ ರೈತ ರಂಗಗಳಲ್ಲೂ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲೂ ದೀರ್ಘ ಕಾಲದ ಪ್ರಾಮಾಣಿಕ ಕೆಲಸದ ಹಿನ್ನೆಲೆಯೊಂದಿಗೆ, ದುಡಿಯುವ ಜನತೆಯ ರಾಜಕೀಯ ಪಕ್ಷವಾದ ಸಿ.ಪಿ.ಐ. (ಎಂ)ನ ರಾಜ್ಯಮಟ್ಟದ ನಾಯಕರಲ್ಲೊಬ್ಬರಾಗಿ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿರುವ ಕಾ. ಕೆ. ಆರ್. ಶ್ರೀಯಾನ್ ಅವರು ಲೋಕಸಭೆಯಲ್ಲಿ ಉಡುಪಿ ಕ್ಷೇತ್ರವನ್ನು ಪ್ರತಿನಿಧೀಕರಿಸಲು ಅತ್ಯಂತ ಸಮರ್ಥ ಅಭ್ಯರ್ಥಿ ಆಗಿರುತ್ತಾರೆ ಎಂ ದು ತ ಮ್ಮ ಲ್ಲಿ ನಿವೇದಿಸಿಕೊಳ್ಳುತ್ತೇವೆ

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K. V. Temple Street. Sultanpet. B-53 Phone: 24154
Editor ; P. Ramachandra Rao
Managing Editor : N. K. Upadhyaya